"Service of the Poor is the Service of God"

ಬಡವರಬಂಧು

ಮಂಗಳೂರು.

BADAVARA BANDHU

OR

THE FRIEND OF THE POOR

MANGALORE.

A HIGH CLASS CANARESE MONTHLY.

Editor: Mangalore Jarappa   Associate Editor: B. Narsappa.

ಪುಷ್ಪ ೨   ಎಸಳು ೧೧.

MAY, 1934.

ವಾರ್ಷಿಕ ಚಂದಾ—ಪರ ಊರವರಿಗೆ ರೂ. 1—4—0.
,, ,, — ಊರವರಿಗೆ ರೂ. 1—0—0.

ಈ ಸಂಚಿಕೆಯ ಬೆಲೆ: 0—1—6.

ನಿನ್ನಂತೆ ನನಗೂ ಸಾವು ನೋವು,—ರೋಗ ರುಜನೆ,—ಹಸಿವು ಬಾಯಾರಿಕೆ,—ಆಶೆ ನಿರಾಶೆಗಳಿವೆ. ನಿನ್ನಂತೆ ನನಗೂ ಆತ್ಮವಿದೆ,—ಹೃದಯವಿದೆ. ಹಣದ ಕೊರತೆ ನಿನಗಿಲ್ಲ, ನನಗುಂಟು—ಎಂದ ಮಾತ್ರಕ್ಕೆ ಸಮಾಜದಲ್ಲಿ ನೀನು ಮುಂದು ನಾನು ಹಿಂದಾಗಬೇಕೇಕೆ? ನನ್ನ ದುಡಿಮೆಯ ಚಕ್ರವು ತಿರುಗಿದರೆ ನಿನ್ನ ಜೀವನದ ಯಂತ್ರವು ಚಲಿಸುವುದು; ನನ್ನ ಬೆವರಿನ ಹನಿಯನ್ನು ಕುಡಿದು ನೀನು ಜೀವಿಸುವೆ; ಧನಕ್ಕಿಂತ ಜನ ಶ್ರೇಷ್ಠ; ಅಲ್ಲದೆ ಜನಕ್ಕಿಂತ ಧನ ಶ್ರೇಷ್ಠವಲ್ಲ! ನನಗಾಗಿ, ನನ್ನವರಿಗಾಗಿ ನಿನ್ನ ಹೃದಯಮಂದಿರವು ತೆರೆಯಲ್ಪಡಲಿ! ನಾನು,—ನನ್ನವರು ನಿನ್ನವರಾಗುವ ದಿನ ಬರಲಿ! ನಿನ್ನ ಹೃದಯದಲ್ಲಿ ಪ್ರೇಮದ ಕಾರಂಜಿಯುದ್ಭವಿಸಲಿ! ದಯೆಯ ಸರೋವರವು ಹರಿಯಲಿ! ಬಡವರ ಮೇಲೆ ನಿನ್ನ ಕರುಣೆಯ ಕಿರಣ ಬೀಳಲಿ!

ಮ ಜಾ.

ಬಡವರಬಂಧು

"BADAVARA BANDHU"

ಸಂಪುಟ 2.	ಮೇ, 1934.	ಸಂಚಿಕೆ 11.

ಭಗವದ್ಗೀತೆ.

ಎಲೆ ಗೀತೆ, ಜಗ-ಗಳ್ಳ ಜಾದುಗಾರನ ಮಗಳೆ,
ನಿಮ್ಮಪ್ಪನ ಗುಣ ನೀನೂ ಕಲಿತಿರುವಿಯಲ್ಲೆ!
ಎಲ್ಲರೂ ನೋಡುವರೆಂದು ನಾನೂ ನೋಡ ಬರ-
ಲೆನ್ನೊಳಗಿಸೆಯೊಳಗಿನ ಮಣಿ ಕದ್ದಿಯಲ್ಲೆ ಕಳ್ಳಿ!

ಜಗಕೆ ತಾ ಮರೆಯಾದರೂ ತನ್ನ ಕುರುಹಿರಲು
ಮಬ್ಬು ಜಗವನಾಗಾಗೆಚ್ಚರಿಸೆ ಹಿಂದಿರಲು
ತನ್ನೆಲ್ಲ ಮಾಟ ಮೋಡಿಯು ಕಲಿಸಿ ಕೊಳಲಿಟ್ಟು
ಹೋದನೇ ಜಗಗೆದೆಯೆ ಹಿಂದೆ ನಿನ್ನನು ಬಿಟ್ಟು!

ಟಿಳಕನ ಟೊಪ್ಪಿಗಯು ಕೆಳಗಿಡಿಸಿದವಳು ನೀನು,
ಗಾಂಧಿಯಿಂ ನಾಂದಿ ಹಾಡಿಸಿಕೊಂಡವಳು ನೀನು,
ರವೀಂದ್ರನೊಳು ಕವೀಂದ್ರತ್ವದ ಸುಲಿಗೆ ಮಾಡಿ
ಏಕಾಗಿ ಲೋಕಕ್ಕೆ ಮೋಹನಾಸ್ತ್ರವೆಸೆದಿ!

ನಿನ್ನ ತಂತ್ರವನರಿಯದೆ ನಾ ಬಂದೆನವ್ವಾ!
'ಮಣಿ' ಕೊಡುವವರೆ ನಿನ್ನ ನಾ ಕಾಡದೆ ಬಿಡೆನವ್ವಾ!!

ಕನ್ನಡ ಕಂದ.
ಪ್ರೇಮಾಯತನ, ತುಂಗಭದ್ರ.

ಕಮಲಾಕಾಂತನ ದಪ್ತರ.

ಬೆಕ್ಕು.

ಅನುವಾದಕರು:—ಶ್ರೀ. ‘ಬಂಕಿಮ ಶಿಷ್ಯ.’

ನಾನು ನನ್ನ ಮಲಗುವ ಕೋಣೆಯಲ್ಲಿ ನೂಲು ಮಂಚದ (ಹೊರಸಿನ) ಮೇಲೆ ಕುಳಿತುಕೊಂಡು ಹುಕ್ಕಾ ಸೇದುತ್ತ ತಲೆದೂಗುತ್ತಲಿದ್ದೆ. ಅಲ್ಲಿ ಒಂದು ಸಣ್ಣ ಹಣತೆಯ ದೀಪವು ಮಿಣ ಮಿಣ ಮಿನುಗುತ್ತಿತ್ತು. ಗೋಡೆಯ ಮೇಲೆ ಚಂಚಲವಾದ ಛಾಯೆಯು ಪ್ರೇತದಂತೆ ನರ್ತಿಸು ತಿತ್ತು. ಅಡುಗೆ ಇನ್ನೂ ಆಗಿರಲಿಲ್ಲ. ಆದ್ದರಿಂದ ನಾನು ಕಣ್ಣು ಮುಚ್ಚಿಕೊಂಡು ಹುಕ್ಕವನ್ನು ಕೈಲಿ ಹಿಡಿದು ಕೊಂಡು,—

“ನಾನೇ ನೆಪೋಲಿಯನ್ ಬೋನೋಪಾರ್ಟ್ ಆಗಿದ್ದರೆ ವಾಟರ್ಲೂ ಯುದ್ಧದಲ್ಲಿ ನಾನು ಗೆಲ್ಲುತ್ತಿದ್ದೆನೋ, ಇಲ್ಲವೋ?” ಎಂದು ಯೋಚಿಸುತ್ತಿದ್ದೆ. ಆ ಸಮಯದಲ್ಲಿ “ಮ್ಯಾವ್” ಎಂದು ಸಣ್ಣ ಧ್ವನಿಯು ಕೇಳಿಸಿತು.

ಕಣ್ಣು ತೆಗೆದು ನೋಡಿದೆ. ನನಗೇನೂ ತೋರದಂತಾಯಿತು. ವಾಟರ್ಲೂ ಯುದ್ಧದಲ್ಲಿ ನೆಪೋಲಿಯನ್ನನು ಸೋಲಿಸಿದ ಡ್ಯೂಕ್ ಒಫ್ ವೆಲಿಂಗ್ಟನ್‌ನೇ ಹಠಾತ್ತಾಗಿ ಬೆಕ್ಕಿನ ರೂಪವನ್ನು ತಳೆದು ನನ್ನ ಹತ್ತಿರ ಅಫೀಮು ಭಿಕ್ಷೆ ಬೇಡಲು ಬಂದಿದ್ದಾನೆಂದು ಮೊದಲು ತೋರಿತು. ನಾನು ಮೊದಲೇ ಕಲ್ಲಿನಂತೆ ಕಠಿಣನಾಗಿ—“ಡ್ಯೂಕ್ ಮಹಾಶಯ, ನಿನಗೆ ಮೊದಲೇ ಉಚಿತವಾದ ಪುರಸ್ಕಾರವನ್ನು ಮಾಡಲಾಗಿದೆ. ಈಗ ಮತ್ತಾವ ಪುರಸ್ಕಾರವನ್ನೂ ಕೊಡಲಾಗುವುದಿಲ್ಲ; ಅತಿ ಆಶೆ ಒಳ್ಳೆಯದಲ್ಲ” ಎಂದು ಹೇಳಬೇಕೆಂದು ಮಾಡಿದ್ದೆನು. ಅಷ್ಟರಲ್ಲಿ ಡ್ಯೂಕನು “ಮ್ಯಾವ್” ಎಂದನು.

ಆಗ ಚೆನ್ನಾಗಿ ಕಣ್ಣು ತೆರೆದು ನೋಡಿದೆ. ವೆಲಿಂಗ್ಟನ್ ಇಲ್ಲ! ಒಂದು ಸಣ್ಣ ಬೆಕ್ಕು ಅಲ್ಲಿ ಕೂತಿದೆ. ಗೌಳಿಗಿತ್ತಿ ಪ್ರಸನ್ನಳು ನನಗಾಗಿ ಹಾಲಿಟ್ಟು ಹೋಗಿದ್ದಳು. ಅದನ್ನು ಬೆಕ್ಕು ನಿಶ್ಶೇಷವಾಗಿ ಕುಡಿದು ಬಿಟ್ಟಿತ್ತು. ಆಗ ನಾನು ವಾಟರ್ಲೂ ರಣರಂಗದಲ್ಲಿ ವ್ಯೂಹರಚನೆಯನ್ನು ಮಾಡುವುದರಲ್ಲಿ ಮಗ್ನನಾಗಿದ್ದುದರಿಂದ ಬೆಕ್ಕನ್ನು ನೋಡಲಿಲ್ಲ.

ಈಗ ಆ ಮಾರ್ಜಾಲ ಸುಂದರಿಯು ನೀರು ಬೆರೆಯದ ಹಾಲಿನಿಂದ ತೃಪ್ತಿ ಹೊಂದಿ, ತನ್ನ ಮನಸ್ಸಿನಲ್ಲಾದ ಸುಖವನ್ನು ಜಗತ್ತಿಗೆ ತೋರಿಸಬೇಕೆಂಬ ಅಭಿಪ್ರಾಯದಿಂದ ಮಧುರವಾದ ಸ್ವರದಲ್ಲಿ “ಮ್ಯಾವ್” ಎನ್ನುತ್ತಿತ್ತು. ಆ ಶಬ್ದದಲ್ಲಿ ವ್ಯಂಗ್ಯಭಾವವಿತ್ತೋ ಏನೋ ನಾನರಿಯೆ. ಅಥವಾ ಅದು ನನ್ನನ್ನು ನೋಡಿ,—“ಸಂಪಾದಿಸುವವರೊಬ್ಬರು, ತಿನ್ನುವವರು ಬೇರೊಬ್ಬರು” ಎಂದು ಹಾಸ್ಯ ಮಾಡುತ್ತಿತ್ತೋ ಏನೋ? ಅಂತೂ ಆ “ಮ್ಯಾವ್” ಎಂಬ ಶಬ್ದದಿಂದ ತನ್ನ ಮನೋಭಾವವನ್ನು ತಿಳಿಸುವ ಅಭಿಪ್ರಾಯವು ಆ ಬೆಕ್ಕಿಗೆ ಇತ್ತೆಂದು ತೋರುವುದು. ಆ ಬೆಕ್ಕು “ನಿನ್ನ ಹಾಲು ನಾನು ಕುಡಿದು ಬಿಟ್ಟೆ—ಈಗ ನೀನು ಏನು ಹೇಳುವೆ?” ಎಂದು ಕೇಳುತಿತ್ತೆಂದು ತಿಳಿದುಕೊಂಡೆನು.

ನಾನೇನು ಹೇಳಲಿ? ನಾನು ಏನು ಹೇಳಬೇಕೆಂದು ನಿಶ್ಚಯಿಸಲಿಲ್ಲ. ಹಾಲು ನಮ್ಮಪ್ಪನ ಮನೆಯದಲ್ಲ. ಹಾಲು ಮಂಗಳೆ ಎಂಬ ಗೋವಿನದು. ಅದನ್ನು ಕರೆದವಳು ಗೌಳಿಗಿತ್ತಿ ಪ್ರಸನ್ನೆ. ಆದ್ದರಿಂದ ಆ ಹಾಲಿನ ಮೇಲೆ ನನಗಿರುವಷ್ಟು ಅಧಿಕಾರವು ಬೆಕ್ಕಿಗೂ ಇತ್ತು. ಅದಕ್ಕೋಸ್ಕರ ನಾನು ಬೆಕ್ಕಿನ ಮೇಲೆ ಕೋಪಿಸಿಕೊಳ್ಳಲಿಲ್ಲ. ಆದಾಗ್ಯೂ ಬೆಕ್ಕು ಹಾಲು ಕುಡಿಯ ಬಂದರೆ ಅದನ್ನು ಓಡಿಸುವ ಒಂದು ಪದ್ಧತಿಯೂ ಬಹು ಕಾಲದಿಂದ ಬಂದಿದೆ. ಆ ಪ್ರಾಚೀನ ಪದ್ಧತಿಯನ್ನು ಅನುಸರಿಸದೆ ಮನುಷ್ಯ ಕುಲಕ್ಕೆ ಕಲಂಕವನ್ನು ತರುವ ಆಸೆಯುಳ್ಳವನಾಗಿಲ್ಲ ನಾನು. ಯಾರಿಗೆ ಗೊತ್ತು? ಆ ಬೆಕ್ಕೆ ತನ್ನ ಸ್ವಜಾತಿಯವರಲ್ಲಿ ಕಮಲಾಕಾಂತನು ಹೇಡಿಯೆಂದು ಹೇಳಿಕೊಳ್ಳಬಹುದು. ಆದ್ದರಿಂದ ಪುರುಷರಂತೆ ನಾನೂ ಕೆಲಸ ಮಾಡಬೇಕು. ಹೀಗೆಂದು ನಿಶ್ಚೈಸಿ, ಕೈಯಲ್ಲಿದ್ದ ಹುಕ್ಕಾವನ್ನು ಕೆಳಗಿಟ್ಟು, ಅಲ್ಲಿ ಇಲ್ಲಿ ಹುಡುಕಿ ಒಂದು ಕಟ್ಟಿಗೆ ತುಂಡನ್ನು ಹಿಡಿದುಕೊಂಡು ಗರ್ವದಿಂದ ಬೆಕ್ಕನ್ನು ಓಡಿಸಲು ಹೋದೆನು.

ಬೆಕ್ಕು ಕಮಲಾಕಾಂತನನ್ನು ಬಲ್ಲದು. ಕಟ್ಟಿಗೆಯನ್ನು ನೋಡಿ ಅದು ವಿಶೇಷ ಭೀತಿಗೊಂಡಿರುವ ಲಕ್ಷಣ

ವನ್ನು ತೋರಲಿಲ್ಲ. ಕೇವಲ ನನ್ನ ಕಡೆಗೆ ನೋಡುತ್ತ, ಒಂದು ಸಲ ಅಗಲವಾಗಿ ಬಾಯಿ ತೆರೆದು ಆಕಳಿಸಿ ಸ್ವಲ್ಪ ಹಿಂದಕ್ಕೆ ಸರಿದು ಕುಳಿತುಕೊಂಡು "ಮ್ಯಾವ್" ಎಂದಿತು. ಅದು ಏನೋ ಪ್ರಶ್ನೆಯನ್ನು ಕೇಳಿತೆಂದು ತಿಳಿದು, ಕೈಯಲ್ಲಿದ್ದ ಕಟ್ಟಿಗೆಯನ್ನು ಬಿಟ್ಟು ಹಾಸಿಗೆಯಲ್ಲಿ ಕುಳಿತು, ಹುಕ್ಕಾ ದೇವಿಯ ಸೇವೆಗಾರಂಭಿಸಿದೆನು. ಆಗ ನನಗೆ ದಿವ್ಯ ಕರ್ಣವು ಪ್ರಾಪ್ತವಾಗಿ ಬೆಕ್ಕಿನ ಭಾಷೆಯನ್ನು ತಿಳಿದುಕೊಳ್ಳಲಾರಂಭಿಸಿದೆನು.

ಬೆಕ್ಕು ಹೇಳಲಾರಂಭಿಸಿತು–"ಮ್ಯಾವ್! ಸುಮ್ಮನೆ ಹೊಡೆಯಲೆತ್ನಿಸುವೆ ಏಕೆ? ಹುಕ್ಕಾ ಸೇದುತ್ತ ಸೇದುತ್ತ ಹಾಗೆಯೇ ಸ್ವಲ್ಪ ಯೋಚನೆ ಮಾಡಿ ನೋಡು. ಈ ಜಗತ್ತಿನಲ್ಲಿ ಹಾಲು, ಬೆಣ್ಣೆ, ಮೊಸರು, ಕೆನೆ, ಮೀನು, ಮಾಂಸ—ಇವುಗಳನ್ನೆಲ್ಲ ಕೇವಲ ನೀವು ತಿನ್ನಬೇಕು. ನಾವು ತಿನ್ನಬಾರದೋ? ನೀವು ಮನುಷ್ಯರು, ನಾವು ಬೆಕ್ಕಿನ ಜಾತಿಗೆ ಸೇರಿದವರು. ನಿಮಗೂ ನಮಗೂ ಭೇದವೇನು? ನಿಮಗೆ ಹಸಿವೆ ಬಾಯಾರಿಕೆಗಳಾಗುವುವು—ನಮಗಾಗುವುದಿಲ್ಲವೇ? ನೀವು ತಿನ್ನುವಾಗ ನಾವು ಅಡ್ಡಿ ಮಾಡುವೆವೆ? ಹಾಗಾದರೆ ನಾವು ತಿನ್ನುವಾಗ ನೀವು ಯಾವ ಶಾಸ್ತ್ರಾಧಾರದಿಂದ ನಮ್ಮನ್ನು ಕಟ್ಟಿಗೆಯನ್ನೆತ್ತಿ ಹೊಡೆಯಲು ಬರುವಿರೆಂದು ನಮಗೆ ಗೊತ್ತಾಗಿಲ್ಲ. ನೀವು ನಮ್ಮಿಂದ ಸ್ವಲ್ಪ ಉಪದೇಶ ಹೊಂದಬೇಕು. (ಪದವೃದ್ಧಿಯಿಂದ) ವಿಜ್ಞರಾದ ಚತುಷ್ಪಾದಿಗಳಿಂದ ಶಿಕ್ಷಣವನ್ನು ಪಡೆಯದ ಹೊರತು ನಿಮ್ಮ ಮಾನವರ ಜ್ಞಾನೋನ್ನತಿಗೆ ಬೇರೆ ಉಪಾಯವಿಲ್ಲ. ನಿನ್ನ ವಿದ್ಯಾಲಯಗಳಲ್ಲಿ ಅಷ್ಟು ದೀರ್ಘಕಾಲ ಓದಿದ ಬಳಿಕ ನೀನು ನನ್ನ ಈ ಮಾತುಗಳನ್ನು ತಿಳಿದುಕೊಳ್ಳಲಾರಂಭಿಸಿರುವೆ ಎಂದು ಕಂಡುಬರುವುದು."

"ಮಂಚದ ಮೇಲೆ ಮಲಗಿರುವ ಮನುಷ್ಯನೆ! ಹೇಳು–ಧರ್ಮವೆಂದರೇನು? ಪರೋಪಕಾರವೆ ಪರಮ ಧರ್ಮವು. ನಾನು ಈ ಹಾಲನ್ನು ಕುಡಿದುದರಿಂದ ಪರೋಪಕಾರ ಸಿದ್ಧಿಯಾಯಿತು. ಆದುದರಿಂದ ನೀನು ಆ ಪರಮ ಧರ್ಮದ ಫಲಭೋಗಿಯಾದೆ. ನಾನು ಕಳ್ಳತನವನ್ನೇ ಮಾಡಿರಲಿ, ಏನೇ ಮಾಡಿರಲಿ, ನಿನ್ನಾ ಧರ್ಮಸಂಚಯಕ್ಕೆ ನಾನು ಮೂಲಕಾರಣನಾದೆನು. ಆದ್ದರಿಂದ ನನ್ನನ್ನು ಹೊಡೆಯದೆ ಹೊಗಳಬೇಕು. ನಾವು ನಿಮ್ಮ ಜಾತಿಯವರ ಧರ್ಮಕ್ಕೆ ಸಹಾಯಕರು."

"ನಾವು ಕಳ್ಳಜಾತಿಯವರು ನಿಜ. ಆದರೆ ನಾವು ಏಕೆ ಕಳ್ಳತನ ಮಾಡಲಾರಂಭಿಸಿದೆವು? ತಿನ್ನುವುದಕ್ಕೆ ಸಿಕ್ಕಿದರೆ ಯಾರು ಕಳ್ಳತನ ಮಾಡುವರು? ನೋಡು, ನಿಮ್ಮಲ್ಲಿ ಕಳ್ಳರೆಂದ ಕೂಡಲೇ ಹೆದರುವ ಪ್ರಯಾಣಿಕರೆನಿಸಿಕೊಂಡಿರುವ ಸಾಧುಗಳು, ಅನೇಕ ಜನ ಕಳ್ಳರಿಗಿಂತ ಅಧಾರ್ಮಿಕರಾಗಿರುವರು. ಅವರಿಗೆ ಕಳ್ಳತನ ಮಾಡುವ ಅವಶ್ಯಕತೆಯಿಲ್ಲವೆಂದು ಅವರು ಕಳ್ಳತನ ಮಾಡುತ್ತಿಲ್ಲ. ಆದರೆ ಅವರಲ್ಲಿ ಅವಶ್ಯಕತೆಗಿಂತಲೂ ಅಧಿಕವಾಗಿ ಧನವಿದ್ದರೂ ಅವರು ಕಳ್ಳರ ಕಡೆ ಕಣ್ಣೆತ್ತಿ ನೋಡುವುದಿಲ್ಲ. ಆದ್ದರಿಂದ ಕಳ್ಳರು ಕದಿಯುತ್ತಾರೆ. ಕಳ್ಳನು ಅಧರ್ಮ ಮಾಡುವುದಿಲ್ಲ. ಕಳ್ಳತನ ಮಾಡುವ ಕಳ್ಳನ ಅಧರ್ಮವು ಲೋಭಿಯಾದ ಧನಿಕನಿಗೆ ಸೇರಿದುದು. ಕಳ್ಳನು ಅಪರಾಧಿಯೆಂದು ಅವನನ್ನು ಶಿಕ್ಷಿಸುವರು. ಆದರೆ ಕಳ್ಳನಿಗಿಂತಲೂ ನೂರು ಪಾಲು ಹೆಚ್ಚಾಗಿ ಅಪರಾಧಿಯಾಗಿರುವ ಆ ಲೋಭಿ ಧನಿಕನನ್ನು ನೀವು ಶಿಕ್ಷಿಸುವುದಿಲ್ಲವೇಕೆ?"

"ನೋಡು, ನಾನು ಗೋಡೆಯಿಂದ ಗೋಡೆಗೆ 'ಮ್ಯಾವ್ ಮ್ಯಾವ್' ಎಂದು ಶಬ್ದ ಮಾಡುತ್ತ ಹೋಗುತ್ತಿರುವೆನು. ಆದಾಗ್ಯೂ ನನ್ನ ಕಡೆ ಯಾರೂ ಒಂದು ರೊಟ್ಟಿಯ ತುಂಡನ್ನು ಕೂಡ ಬಿಸಾಕುವುದಿಲ್ಲ. ಜನರು ತಮಗೆ ಹೆಚ್ಚಾದುದನ್ನು ನಾಯಿಗೆ ಕೊಡುವರು, ಚರಂಡಿಯಲ್ಲಿ ಬಿಸಾಡುವರು, ಆದರೆ ನಮ್ಮನ್ನು ಕರೆದು ಕೊಡುವುದಿಲ್ಲ. ನಿಮಗೆ ಹೊಟ್ಟೆ ತುಂಬಿದೆ, ನಮ್ಮ ಹೊಟ್ಟೆಯಲ್ಲಿರುವ ಹಸಿವು ನಿಮಗೆ ಹೇಗೆ ತಿಳಿಯಬೇಕು? ಅಯ್ಯೋ! ದರಿದ್ರರಿಗೆ ಸಹಾನುಭೂತಿ ತೋರಿದರೆ ನಿಮ್ಮ ಗೌರವಕ್ಕೆ ಕುಂದುಬರುವುದೇನು? ದರಿದ್ರರ ವ್ಯಥೆಯಿಂದ ವ್ಯಥಿತನಾಗುವುದು ಲಜ್ಜಾಸ್ಪದವೆಂಬುದರಲ್ಲಿ ಸಂದೇಹವಿಲ್ಲ. ಒಬ್ಬ ಕುರುಡನಿಗೂ ಒಂದು ಹಿಡಿ ಭಿಕ್ಷೆಯನ್ನು ನೀಡದವನಿಗೆ, ಯಾವನಾದರೊಬ್ಬ ರಾಜನಿಗೆ ಸಂಕಟವೆಂದರೆ ರಾತ್ರಿ ನಿದ್ದೆ ಮಾಡಲಾರರು. ಎಲ್ಲರೂ ಪರರ ವ್ಯಥೆಯಲ್ಲಿ ವ್ಯಥಿತರಾಗುವುದು ಸಮ್ಮತವಾದ ವಿಚಾರ; ಆದರೆ ಸಾಮಾನ್ಯರ ದುಃಖದಲ್ಲಿ ದುಃಖಿಯಾಗುವುದೇ!–ಛೀ ಯಾರು ಆಗುವರು?"

"ನೋಡು, ಯಾವನಾದರೊಬ್ಬ ವೇದಾಂತ ಶಿರೋಮಣಿ, ಅಥವಾ ಮತ್ತೊಬ್ಬ ನ್ಯಾಯಾಲಂಕಾರನು ಬಂದು ನಿನ್ನ ಹಾಲನ್ನು ಕುಡಿದು ಹೋಗಿದ್ದರೆ ಆಗ ನೀನು ಕಟ್ಟಿಗೆ ತೆಗೆದುಕೊಂಡು ಅವನನ್ನು ಹೊಡೆಯುವುದಕ್ಕೆ ಹೋಗು

ತ್ತಿದ್ದೆಯೊ? ಅದಕ್ಕೆ ಬದಲಾಗಿ, ಕೈಜೋಡಿಸಿ-"ಏನು, ಇನ್ನು ಸ್ವಲ್ಪ ತಂದು ಕೊಡಲೋ?" ಎಂದು ಕೇಳುತ್ತಿದ್ದೆ. ಮತ್ತೆ ನನ್ನನ್ನು ಹೊಡೆಯಲು ಕಟ್ಟಿಗೆ ಏಕೆ? ನೀನು ಹೇಳ ಬಹುದು—"ಅವರು ದೊಡ್ಡ ಪಂಡಿತರು, ಬಹು ಮಾನ್ಯರು' ಎಂದು. ಒಳ್ಳೆಯದು, ಪಂಡಿತರು ಅಥವಾ ಮಾನ್ಯರಾದ ಮಾತ್ರಕ್ಕೆ ಅವರಿಗೆ ನಮಗಿಂತಲೂ ಹೆಚ್ಚು ಹಸಿವಾಗುವುದೊ? ಅದು ನಿಜವಲ್ಲ. ಅವಶ್ಯಕತೆಯಿಲ್ಲದವರಿಗೆ ಕೊಡುವುದು ಮನುಷ್ಯ ಜಾತಿಯ ರೋಗ. ದರಿದ್ರನ ಹಸಿವನ್ನು ಯಾರೂ ತಿಳಿಯಲಾರರು. ಯಾರು ಬೇಡ ಬೇಡ ಎಂದು ನಿರಾ ಕರಿಸುತ್ತಿರುವರೋ ಅಂತಹವರಿಗೆ ಭೋಜನದ ಏರ್ಪಾಡನ್ನು ಮಾಡಿ, ಯಾವನು ಹಸಿವನ್ನು ತಡೆಯಲಾರದೆ, ನೀವು ಕರೆಯ ದಿದ್ದರೂ ಬಂದು ಅನ್ನವನ್ನುಂಡು ಹೋಗುವನೋ ಅಂತಹವ ನನ್ನು ಕಳ್ಳನೆಂದು ಶಿಕ್ಷಿಸುವಿರಿ—ಛಿ! ಛಿ!! ನರಜನ್ಮವೆ!!!"

"ನೋಡು ನಮ್ಮ ಅವಸ್ಥೆಯನ್ನು ನೋಡು! ನಾವು ಮನೆಯಿಂದ ಮನೆಗೆ, ಗೋಡೆಯಿಂದ ಗೋಡೆಗೆ, ಅಂಗಳ ದಿಂದ ಅಂಗಳಕ್ಕೆ "ಮ್ಯಾವ್-ಮ್ಯಾವ್" ಎಂದು ತಿರುಗು ತ್ತಿರುವೆವು. ಯಾರೂ ನಮಗೆ ಒಂದು ತುಂಡು ರೊಟ್ಟಿ ಯನ್ನೂ ಬಿಸಾಡುವುದಿಲ್ಲ. ಆದರೆ ಯಾವುದಾದರೊಂದು ಬೆಕ್ಕು ನಿಮ್ಮ ಪ್ರೀತಿಗೆ ಪಾತ್ರವಾಗಿದ್ದರೆ—ಆ ಗೃಹಮಾರ್ಜಾ ಲವು-ಮುದುಕನ ಹೆಂಡತಿಯಾದ ಯುವತಿಯ ಅಣ್ಣನಂತೆ ಅಥವಾ ಮೂರ್ಖನಾದ ಧನಿಕನ ಹತ್ತಿರವಿರುವ ಚದುರಂಗದ ಆಟಗಾರನಂತೆ ಪುಷ್ಟಿಗೊಂಡಿರುವುದು. ಅದರ ಮೈತುಂಬ ಕೂದಲುಗಳು ತುಂಬಿರುವುವು. ಅದರ ರೂಪವನ್ನು ನೋಡಿ ಅನೇಕರು ಮಾರ್ಜಾಲಕವಿಗಳಾಗಿ ಬಿಡುವರು."

"ಮತ್ತೆ ನಮ್ಮ ಅವಸ್ಥೆಯನ್ನು ನೋಡು. ಆಹಾರ ವಿಲ್ಲದೆ ಹೊಟ್ಟೆಯು ಬೆನ್ನಿಗೆ ಅಂಟಿದೆ. ಎಲುಬುಗಳು ಮುಂದೆ ಚಾಚಿಕೊಂಡಿವೆ. ನಾಲಿಗೆ ಹೊರಗೆ ಬರುತ್ತಿವೆ. ಬಾಲವು ಕೆಳಗೆ ಬೀಳುತ್ತಿದೆ. ಯಾವಾಗಲೂ ಹಸಿವಿನಿಂದ ಬಳಲುತ್ತ ಮ್ಯಾವ್-ಮ್ಯಾವ್ ಎಂದು ಕೂಗುತ್ತಿರುವೆವು. ತಿನ್ನುವುದಕ್ಕೆ ಏನೂ ಸಿಕ್ಕಿಲ್ಲ. ನಮ್ಮ ಕಪ್ಪು ಚರ್ಮವನ್ನು ನೋಡಿ ತಿರಸ್ಕರಿಸಬೇಡಿ. ಈ ಜಗತ್ತಿನ ಮತ್ಸ್ಯ ಮಾಂಸ ಗಳಲ್ಲಿ ನಮಗೂ ಅಧಿಕಾರವಿದೆ. ತಿನ್ನುವುದಕ್ಕೂ ಅಧಿ ಕಾರವಿದೆ. ತಿನ್ನುವುದಕ್ಕೆ ಕೊಡಿ, ಇಲ್ಲವಾದರೆ ಕಳ್ಳತನ ಮಾಡುವೆವು. ನಮ್ಮ ಕರಿಚರ್ಮ, ಒಣಗಿದ ಬಾಯಿ, ಕ್ಷೀಣವೂ, ಕರುಣಾಪೂರ್ಣವೂ ಆದ ನಮ್ಮ "ಮ್ಯಾವ್—ಮ್ಯಾವ್" ಸ್ವರ, ಇವುಗಳಿಂದಲೂ ನಿಮಗೆ ದುಃಖವಾಗು ವುದಿಲ್ಲವೆ? ದಯೆ ಬರುವುದಿಲ್ಲವೆ? ಕಳ್ಳರಿಗೆ ಶಿಕ್ಷೆ ಇದೆ- ನಿರ್ದಯತ್ವಕ್ಕೆ ಶಿಕ್ಷೆ ಇಲ್ಲವೊ? ದರಿದ್ರರ ಆಹಾರ ಸಂಗ್ರಹ ಕಾರ್ಯಕ್ಕೆ ಶಿಕ್ಷೆ ಇದೆ. ಧನಿಕರ ಕಾರ್ಪಣ್ಯಕ್ಕೆ ಶಿಕ್ಷೆ ಯಿಲ್ಲವೊ? ಕಮಲಾಕಾಂತ, ನೀನು ದೂರದರ್ಶಿ, ತಿಳು ವಳಿಕೆಯುಳ್ಳವನು. ಅಫೀಮು ಸೇವಕನು, ಧನಿಕನ ದೋಷದಿಂದಲೇ ದರಿದ್ರನು ಚೋರನಾಗುವನೆಂದು ನಿನಗೂ ತಿಳಿಸಬೇಕೊ? ಐನೂರು ಜನ ದರಿದ್ರರನ್ನು ವಂಚಿಸಿ, ಆ ಐನೂರು ಜನರ ಆಹಾರವನ್ನು ತನ್ನಲ್ಲಿ ಸಂಗ್ರಹಿಸಿಟ್ಟುಕೊಂಡಿ ರಲು ಯಾವನಿಗೆ ಅಧಿಕಾರವಿದೆ? ಒಂದು-ಸಂಗ್ರಹಿಸಿಟ್ಟು ಕೊಂಡರೂ ಇಟ್ಟುಕೊಳ್ಳಲಿ, ಅದನ್ನು ದರಿದ್ರರಿಗೆ ಬೇಕಾದಾಗ ತಿನ್ನುವುದಕ್ಕೆ ಏಕೆ ಕೊಡಬಾರದು? ಕೊಡದಿದ್ದರೆ ದರಿದ್ರರು ಅವಶ್ಯವಾಗಿ ಅದನ್ನು ಕದಿಯಲೇ ಬೇಕಾಗುವುದು. ಏಕೆಂದರೆ ಹಸಿವಿನಿಂದ ಸಾಯುವುದಕ್ಕಾಗಿ ಯಾರೂ ಈ ಪೃಥ್ವಿಗೆ ಬಂದಿಲ್ಲ."

ನನಗೆ ಇನ್ನು ಸಹಿಸಲಾಗಲಿಲ್ಲ. ನಾನು ಹೇಳಿದೆ- "ನಿಲ್ಲು! ನಿಲ್ಲು! ಮಾರ್ಜಾಲ ಪಂಡಿತ! ನೀನು ಹೇಳುವು ದೆಲ್ಲ ಬಹಳ ಸೋಷಿಯಲಿಸ್ಟಿಕ್ (Socialistic) ಆಗಿದೆ. ಆದ್ದರಿಂದ ಸಮಾಜವು ತಲೆಕೆಳಗಾಗಬಹುದು. ಅವರವರ ಶಕ್ತಿಗನುಸಾರವಾಗಿ ಅವರು ಧನ ಸಂಗ್ರಹ ಮಾಡಿ ಚೋರರ ಹಾವಳಿಯಿಂದ ಅವರು ಸುಖವಾಗಿ ಅದನ್ನು ಭೋಗಿಸ ಲಾಗದೆ ಹೋಗಿದ್ದರೆ, ಧನ ಸಂಗ್ರಹದ ಪ್ರಯತ್ನವನ್ನೇ ಯಾರೂ ಮಾಡುತ್ತಿರಲಿಲ್ಲ. ಆದ್ದರಿಂದ ಸಮಾಜದ ಆರ್ಥಿಕ ಉನ್ನತಿಗೆ ಅಥವಾ ಧನ ವೃದ್ಧಿಗೆ ಕುಂದಕವುಂಟಾಗುತಿತ್ತು.

ಬೆಕ್ಕು ಹೇಳಿತು—"ಧನ ವೃದ್ಧಿಯಾಗದಿದ್ದರೆ ನಮ ಗೇನು? ಸಮಾಜದ ಧನ ವೃದ್ಧಿ ಎಂದರೆ ಧನಿಕರ ಧನ ವೃದ್ಧಿ ಎಂದರ್ಥ. ಧನಿಕನಿಗೆ ಧನ ವೃದ್ಧಿಯಾಗದಿದ್ದರೆ ದರಿದ್ರನಿ ಗಾದ ನಷ್ಟವೇನು?"

ನಾನು ತಿಳುವಳಿಕೆ ಹೇಳಿದೆ-"ಸಾಮಾಜಿಕ ಧನ ವೃದ್ಧಿ ಯಾಗದೆ ಸಮಾಜೋನ್ನತಿ ಆಗುವುದಿಲ್ಲ" ಎಂದು. ಬೆಕ್ಕು ಕೋಪದಿಂದ ಹೇಳಿತು—"ನನಗೆ ತಿನ್ನುವುದಕ್ಕೆ ಸಿಕ್ಕದಿದ್ದರೆ ನಿಮ್ಮ ಸಮಾಜದ ಉನ್ನತಿಯನ್ನು ಕಟ್ಟಿಕೊಂಡು ನಾನೇನು ಮಾಡಲಿ?"

ಬೆಕ್ಕಿಗೆ ತಿಳಿಯ ಹೇಳುವುದು ಕಠಿಣವಾಯಿತು. ವಿಚಾರಕರೂ ನೈಯ್ಯಾಯಿಕರೂ ಆದವರಿಗೆ ಕೆಲವು ಸಮಯದಲ್ಲಿ ಯಾವುದೂ ಏನೂ ತಿಳಿಯುವುದಿಲ್ಲ. ಈ ಬೆಕ್ಕಾದರೋ ಸುವಿಚಾರಕವಾಗಿದೆ. ಅದರ ತರ್ಕವೂ ವಿಶೇಷ ಪ್ರಬಲವಾಗಿದೆ, ಆದ್ದರಿಂದ ನನ್ನ ಮಾತನ್ನು ತಿಳಿದುಕೊಳ್ಳದಿರಲು ಅದಕ್ಕೆ ಅಧಿಕಾರವಿದೆ. ನಾನು ಸಮಾಧಾನದಿಂದ "ಸಮಾಜದ ಉನ್ನತಿಯಿಂದ ದರಿದ್ರರಿಗೆ ಪ್ರಯೋಜನವಾಗುದಿದ್ದರೂ, ಧನಿಕರಿಗೆಂದರೂ ವಿಶೇಷ ಪ್ರಯೋಜನವಾಗುವುದು. ಆದ್ದರಿಂದ ಚೋರರನ್ನು ಶಿಕ್ಷಿಸುವುದು ಕರ್ತವ್ಯವಾಗುವುದು'' ಎಂದು ಹೇಳಿದೆ.

ಆಗ ಬೆಕ್ಕು ಮತ್ತೆ ಹೇಳಿತು—''ನೀವು ಕಳ್ಳನಿಗೆ ಮರಣ ದಂಡನೆಯನ್ನು ವಿಧಿಸಿರಿ. ಅದರಿಂದಲೂ ನಮಗೆ ದುಃಖವಾಗುವುದಿಲ್ಲ. ಆದರೆ ಅದರೊಂದಿಗೆ ಇನ್ನೊಂದು ನಿಯಮವನ್ನು ಮಾಡಿಡಬೇಕು—ಕಳ್ಳನಿಗೆ ಶಿಕ್ಷೆಯನ್ನು ವಿಧಿಸುವ ನ್ಯಾಯಾಧೀಶನು ಮೂರು ದಿನ ಮುಂಚೆಯೇ ಉಪವಾಸ ಮಾಡಬೇಕು. ಆಗ ಆ ನ್ಯಾಯಾಧೀಶನು ಕಳ್ಳತನದಿಂದಲಾದರೂ ತಿಂಡಿ ತಿನ್ನಲು ಇಚ್ಛಿಸದಿದ್ದರೆ ಆಗ ಅವನು ಸಂತೋಷದಿಂದ ಕಳ್ಳನನ್ನು ಗಲ್ಲು ಮರಕ್ಕೇರಿಸಲಿ. ನನ್ನನ್ನು ಹೊಡೆಯಲು ಕಟ್ಟಿಗೆ ತೆಗೆದುಕೊಂಡು ಬಂದ ನೀನು ಇವತ್ತಿನಿಂದ ಮೂರು ದಿನ ಉಪವಾಸ ಮಾಡು. ಆ ಮೇಲೂ ನೀನು ನಸೀರಾಮ ಬಾಬುವಿನ ಅಡಿಗೆ ಮನೆಯಲ್ಲಿ ಸಿಕ್ಕಿಬೀಳದಿದ್ದರೆ, ನನ್ನನ್ನು ಬೇಕಾದಷ್ಟು ಹೊಡಿ, ನಾನು ಉಸಿರೆತ್ತುವುದಿಲ್ಲ.''

ವಿಚಾರದಲ್ಲಿ ಆದಷ್ಟು ಗಂಭೀರ ಭಾವದಿಂದ ಉಪದೇಶ ಮಾಡಲೆತ್ನಿಸಬೇಕೆಂದು ಪ್ರಾಜ್ಞರಾದವರು ಹೇಳುವರು. ನಾನೂ ತದನುಸಾರವಾಗಿ ಹೇಳಲಾರಂಭಿಸಿದೆ—''ಬೆಕ್ಕೇ, ನೋಡು. ನಿನ್ನ ಈ ಮಾತುಗಳೆಲ್ಲ ನೀತಿ ವಿರುದ್ಧವಾಗಿವೆ. ಇವುಗಳನ್ನು ಚರ್ಚಿಸುವುದು ಕೂಡ ಪಾಪವು. ನೀನು ಈ ಕೆಟ್ಟ ಆಲೋಚನೆಗಳನ್ನೆಲ್ಲ ಬಿಟ್ಟು ಧರ್ಮಾಚರಣೆಯಲ್ಲಿ ಮನಸ್ಸಿಡು. ನಿನಗೆ ಬೇಕಾದರೆ ಓದುವುದಕ್ಕೆ ''ನ್ಯೂಮನ್'' ''ಪಾರ್ಕರ್'' ಮಹಾಶಯರ ಗ್ರಂಥಗಳನ್ನು ಕೊಡುತ್ತೇನೆ. ಮತ್ತೆ ಕಮಲಾಕಾಂತನ ದಫ್ತರವನ್ನು ಓದುವುದರಿಂದಲೂ ನಿನಗೆ ಕಿಂಚಿತ್ ಲಾಭವಾಗುವುದು. ಅದರಿಂದ ನಿನಗೆ ಮತ್ತೇನು ಗೊತ್ತಾಗದಿದ್ದರೂ ಅಫೀಮಿನ ಅಸೀಮ ಮಹಿಮೆಯು ಚೆನ್ನಾಗಿ ತಿಳಿಯುವುದು. ಈಗ ಸ್ವಸ್ಥಾನಕ್ಕೆ ಹೋಗು. ಪ್ರಸನ್ನಳು ನಾಳೆ ''ಖೋವಾ'' ತಂದುಕೊಡುವೆನೆಂದು ಹೇಳಿದ್ದಾಳೆ. ಮುಖ ತೊಳೆದುಕೊಳ್ಳುವ ಸಮಯಕ್ಕೆ ಸರಿಯಾಗಿ ಇಲ್ಲಿಗೆ ನೀನು ಬಾ, ಇಬ್ಬರೂ ಹಂಚಿಕೊಂಡು ತಿನ್ನೋಣ. ಇಂದು ಇನ್ನಾರ ಪಾತ್ರವನ್ನೂ ನೆಕ್ಕಬೇಡ. ಮತ್ತೆ ಬಹಳ ಹಸಿವಾದರೆ ಇಲ್ಲಿಗೆ ಬಾ. ನಾನು ಅಫೀಮಿನ ಒಂದೆರಡು ಗುಳಿಗಳನ್ನು ಕೊಡುವೆನು.''

ಬೆಕ್ಕು ಹೇಳಿತು—''ಅಫೀಮಿನಿಂದ ನನಗೆ ಪ್ರಯೋಜನವಿಲ್ಲ. ಇನ್ನು ಬೇರೆಯವರ ಪಾತ್ರ ನೆಕ್ಕುವ ವಿಚಾರ. ಹಸಿವಾದಾಗ ತೋರಿದಂತೆ ಮಾಡುವೆನು—ಮ್ಯಾವ್—ಮ್ಯಾವ್—ಮ್ಯಾವ್.''

ಬೆಕ್ಕು ಹೊರಟು ಹೋಯಿತು. ಒಂದು ಪತಿತ ಆತ್ಮವನ್ನು ಅಂಧಕಾರದಿಂದ ಪ್ರಕಾಶಕ್ಕೆ ತಂದೆನೆಂದು ಭಾವಿಸಿ, ಕಮಲಾಕಾಂತನಿಗೆ ವಿಶೇಷ ಆನಂದವಾಯಿತು.

ಶ್ರೀ ಕಮಲಾಕಾಂತ ಚಕ್ರವರ್ತಿ.

(ನಗುವ—ನಂದ)

ಮೂರನೇ ವರ್ಷಕ್ಕೆ ಈ ಮಾಸಿಕವು ಬೇಕಾದ ಮತ್ತು ಬೇಡವಾದ ಚಂದಾದಾರರು ಹಾಗೆ ತಿಳಿಸಬೇಕು.

(ಮೆನೇಜರ್ ಬ. ಬ.)

ಬಡತನದಿ

ಬಡತನವು;
ಬಡತನವು;
ವಿಶ್ವತೋಮುಖವಾಗಿ:—
ಸುಡುತಲಿದೆ,
ಸುಡುತಲಿದೆ;
ತಪ್ತ ಸಂಸಾರದಲಿ;
—ತೃಪ್ತಿಯರಿವಿರದಲ್ಲಿ,—
ಸತ್ತ ಸಾವಿನ ನೋವ-
ನೊತ್ತಿ ನುತ್ತುವುದೆದೆಗೆ.
ಬಡತನವು . . . . .

○ ○ ○ ○

ಕೊರಗುವುದು;
ಸೊರಗುವುದು;
ಸಿರಿಯ ಕಿರಿತನಕಾಗಿ
ಮರುಗುವೆದೆ,
ಕರಗುತಿದೆ
ಬಳಿಯ ಸೇರದ ಸಾವು.
ತಿಳಿಯಬಾರದೆ ನೋವು?
ಕಳೆಯಲಾರದ ಜೀವ,
ತಳೆಯಲಾರದು ಕಾವ,
ಬಡತನವು . . . . .

○ ○ ○ ○

ಹೊಟ್ಟೆಯಲಿ;
ಬಟ್ಟೆಯಲಿ;
ಸರ್ವ ಸಾಮಸ್ತ್ಯದಲಿ:—
ಶೂನ್ಯತೆಯು,
ಮಾನ್ಯತೆಯು-
ಕತ್ತನೆತ್ತುತೆ ಜಗದಿ,
ಸುತ್ತುನೊಳ್ಪುಜ್ಜಗದಿ;
ಎತ್ತೆತ್ತಲವಮಾನ,
ಮುತ್ತಿ ಬತ್ತುವುದು ಮನ.
ಬಡತನವು . . . . .

○ ○ ○ ○

ತೊಳಲಿಹೆವು;
ಬಳಲಿಹೆವು;
ದಾರಿದ್ರ್ಯ ಸಾಗರದಿ:—
ಮುಳುಗಿಹೆವು,
ಮುಳುಗಿಹೆವು,
ಮರಣದರಿವಿನೊಳಿಮುಗೆ,
ಸರಸ ವಿರಸತೆಯುನಗೆ-
ಬರಬೇಕು, ಅದಕಾಗಿ.
ತೆರಳಬೇಕ್ಕೆ ಸಾಗಿ.
ಬಡತನವು . . . . .

○ ○ ○ ○

(ಕ್ರಾಂತಿಯನು;
ಶಾಂತಿಯನು;
ದಾರಿದ್ರ್ಯದೊಡೆತನದಿ:-
ಬೆರೆಸುತಲಿ,
ಮೆರೆಸುತಲಿ,
ಬೆಂದೊಡಲು-ಸವಿಯುಣಿಸಿ-
ನಿಂದ ತಣಿಯುವ-ಕನಸ-
ನಂದು ಕಾಣುವ ಸೊಗಸ-
ದೊಂದಾದರೆನಗಿರಲಿ!)

ದುರ್ಗಾದಾಸ.

ಸಾಲ.

ಲೇಖಕರು:— ಶ್ರೀ। ಪಿ. ಯಂ. ಪೂವಯ್ಯ ಕೊಡಗು.

ನಮ್ಮ ಫಲವತ್ತಾದ ಪುಟ್ಟ ದೇಶದ ಉದ್ದಗಲಕ್ಕೂ ಹಲ ಕೆಲವರಲ್ಲದೆ ಹೆಚ್ಚಿನ ಜನರು ಸಾಲದ ಬಲೆಯಲ್ಲಿ ಸಿಕ್ಕಿ ನರಳುವುದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಪ್ರತಿಯೊಬ್ಬ ರೈತನಿಗಿರುವ ಸಾಕಷ್ಟು ಜಾಗದಲ್ಲು ತಮಗೆ ಬೇಕಾದಂಥಾ ಕಾಫಿ, ಕಿತ್ತಳೆ ವಗೈರೆ ಫಲ ಪೈರುಗಳನ್ನು ಬೆಳೆಸುವುದರ ಬದಲು ಲಂತಾನವೆಂಬ ಮಹಾ ಪಿಶಾಚಿಯನ್ನು ಹಬ್ಬಿಸಿಕೊಂಡು ತಮ್ಮ ಜಾನುವಾರುಗಳಿಗೆ ಸಹ ಮೇಯುವುದಕ್ಕೆ ಸ್ಥಳವಿಲ್ಲದಂತೆ ಮಾಡಿಕೊಂಡಿರುವರು. ಅನೇಕರು ದನಗಳನ್ನು ಪೋಷಣೆ ಮಾಡುವುದು ಕಷ್ಟವೆಂದು ತುಪ್ಪ ಬೆಣ್ಣೆಯನ್ನು ಕೊಂಡುಕೊಳ್ಳುವರು. ಎಲ್ಲರೂ ಸುಖ ಜೀವನ ನಡೆಸಲೋಸುಗ ಸೋಮಾರಿತನವನ್ನು ಗೆಳೆಯನನ್ನಾಗಿ ಮಾಡಿಕೊಂಡು ತಮ್ಮ ಪ್ರತಿಯೊಂದು ಚಿಕ್ಕ ಕೆಲಸವನ್ನು ಆಳಿನ ಮೂಲಕ ಮಾಡಿಸುವುದರಿಂದ ದೇಹಕ್ಕೆ ಆಯಾಸವಿಲ್ಲದೆ ಹಸಿವೆಯು ಬಹಳ ಮಟ್ಟಿಗೆ ಕಡಿಮೆಯಾಗುವುದು ಮತ್ತು ನಾಲಗೆಯು ರುಚಿಕರವಾದ ತಿಂಡಿಯನ್ನು ಹುಡುಕುವುದು, ಹೀಗೆ ರುಚಿಕರವಾದ ತಿಂಡಿಗಾಗಿಯೂ, ಆಳಿನ ಸಂಬಳಕ್ಕಾಗಿಯೂ ಇನ್ನಿತರ ದುರ್ನಿಮಿತ್ತಗಳಿಗೆ ವ್ಯಯಮಾಡುವುದರಿಂದ ಅನೇಕರು ಸಾಲದಲ್ಲಿ ಮುಳುಗುವರೆಂದು ಹೇಳಬಹುದು.

ಇದಲ್ಲದೆ ಅನೇಕರು ಸಿಷಾ ಸೇವನೆಯು ಒಂದು ಗೌರವದ ಗುರುತೆಂದೂ, ಒಳ್ಳೆಯದೆಂದೂ ಇನ್ನೂ ಭಾವಿಸುವರು, ಹೀಗೆ ಸಿಷಾ ದೇವಿಯನ್ನು ಒಮ್ಮೆ ಒಲಿಸಿಕೊಂಡರೆ ಸರಿ. ಮತ್ತೆ ಹೇಳುವುದೇನು? ಮದಿರಾ ದೇವಿಗೆ ಕಾಣಿಕೆ ಕೊಡುವುದಕ್ಕಾಗಿ ತನ್ನ ಆಸ್ತಿಯನ್ನು ಸಹ ವಿಕ್ರಯಿಸುವುದಕ್ಕೆ ಹಿಂತೆಗೆಯುವುದಿಲ್ಲ. ಕೊಂಚ ಮಾತುಗಳಿಂದ ಹೇಳುವುದಾದರೆ, ಎಂದಿನ ವರೆಗೆ ಜನರು ಕುಡಿಕತನವನ್ನು ಬಿಡುವುದಿಲ್ಲವೋ ಅಂದಿನ ವರೆಗೆ ಜನರೂ ದೇಶವೂ ಉದ್ಧಾರವಾಗುವುದಿಲ್ಲ. ಅನೇಕರು ಕಳ್ಳಿನ ದುಷ್ಪರಿಣಾಮವನ್ನು ಓದಿಯೂ, ಕೇಳಿಯೂ ಕಂಡೂ ಇದ್ದರೂ ಈ ಸಿಷಾ ಸೇವನೆಯನ್ನು ಬಿಡದಿರುವುದು ಬಹಳ ವ್ಯಸನದ ಸಂಗತಿಯಾಗಿದೆ. ಇದಲ್ಲದೆ ಈಗಿನ ಕಾಲದಲ್ಲಿ ಕೆಲವರು ನಿರಕ್ಷರಕುಕ್ಷಿಗಳಾಗಿದ್ದರೂ ನಯವಾದ ಕಣ್ಭ್ರಮೆಯನ್ನುಂಟುಮಾಡುವ ಬಾಳಿಕೆ ಇಲ್ಲದ ಪರದೇಶೀ ಬಟ್ಟೆಯನ್ನು ಧರಿಸಲೋಸುಗ ಹೆಚ್ಚಾಗಿ ವೆಚ್ಚಮಾಡುವರು. ಬಾಳಿಕೆ ಇರುವ ಸ್ವದೇಶೀ ಬಟ್ಟೆಯನ್ನು ಧರಿಸುವುದಕ್ಕೆ ಅಸಹ್ಯಪಡುವರು. ಅಂಥಾ ವಿಧವಿಧವಾದ ಬಟ್ಟೆಯು ಇರುವಾಗ ಒಬ್ಬನನ್ನು ಶುಚಿಯಾದ ಸ್ವದೇಶಿ ಬಟ್ಟೆಯನ್ನು ಧರಿಸಿದರೆ ದೂಷಿಸುವರು. ಇದನ್ನು ಸಹಿಸಲಾರದೆ ಬಡವರು ಸಹ ಸಾಲ ಮಾಡಿಯಾದರೂ ಥಳಥಳಿಸುವ ಬಟ್ಟೆ ಧರಿಸುವರು ಮತ್ತು ನಮ್ಮ ಜನರಲ್ಲಿ ಅಭಿಮಾನಕ್ಕೆ ಹೊಡೆದಾಡುವ ಅಭ್ಯಾಸ ಹೆಚ್ಚು. ಒಬ್ಬ ದೊಡ್ಡವನ ಮದುವೆಯಲ್ಲಿ ಬ್ರಾಂಡಿ, ವಿಸ್ಕಿ ಸೇರಿಸಿದರೆ ಗ್ರಾಮದಲ್ಲಿ ವಾಸಮಾಡುವ ಬಡವನೊಬ್ಬನು ತಾನು ಸಾರಾಯವನ್ನಾದರೂ ಉಪಯೋಗಿಸಬೇಕೆಂದು ನೆನಸಿ ದುಡ್ಡಿಲ್ಲದೆ ಹೋದರೂ ಸಾಲಮಾಡಿ ಸಾರಾಯವನ್ನು ತಂದು ಸೂರೆಮಾಡುವನು. ಹೀಗೆಯೇ ಉಡುಪಿನಲ್ಲಿಯೂ ಊಟೋಪಚಾರದಲ್ಲಿಯೂ, ಜೂಜುಗಾರಿಕೆ ಮೊದಲಾದುವುಗಳಲ್ಲಿಯೂ ತಮ್ಮ ಅಭಿಮಾನವನ್ನು ಹೋಲಿಸಿ, ಕಟ್ಟ ಕಡೆಗೆ ಶೆಟ್ಟಿ ಸಾಹುಕಾರರ ಬಲೆಯಲ್ಲಿ ಸಿಕ್ಕಿ ನರಳುತ್ತಿರುವರು-

ಒಂದು ದೇಶದ ಅಭಿವೃದ್ಧಿಗೂ, ಒಳ್ಳೆಯ ನಡತೆಗೂ, ಸಿರಿ ಸಂಪತ್ತಿಗೂ ಆ ದೇಶದ ಮುಂದುವರಿದ ವಿದ್ಯಾವಂತರೂ ಐಶ್ವರ್ಯವಂತರೂ ಕಾರಣರೆಂದು ಹೇಳಬಹುದು. ನಮ್ಮ ದೇಶದ ಮುಂದಾಳುಗಳು ದೇಶಕ್ಕೆ ಒಳ್ಳೆಯ ಪಾಠ ಕಲಿಸುವುದರ ಬದಲು ಮದ್ಯಪಾನವನ್ನೂ, ಜೂಜುಗಾರಿಕೆಯನ್ನೂ, ಬಟ್ಟೆಬರೆಗಳಲ್ಲಿ ಪೋಷಾಕುಮಾಡುವ ದುರಭ್ಯಾಸವನ್ನೂ ಕಲಿಸಿಕೊಟ್ಟಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಹಣವಂತರು ಹೇಗೆ ನಡೆದರೂ ಬಡವರು ಅದನ್ನೇ ಯಾಕೆ ಹಿಂಬಾಲಿಸಬೇಕು ಎಂಬ ಸಂಶಯವು ಹಲ ಕೆಲವರಲ್ಲಿ ಬಾರದೆ ಇರದು. ಇದೇ ವಿಷಯವನ್ನು ಕುರಿತು ಶ್ರೀ ಕೃಷ್ಣ ಪರಮಾತ್ಮನು ಗೀತೆಯಲ್ಲಿ ಅರ್ಜುನನಿಗೆ ಹೀಗೆಂದಿರುವನು:–" ಯದ್ಯದಾ ಚರತಿ ಶ್ರೇಷ್ಠ ಸ್ತತ್ತ ದೇವತರೋ ಜನಃ।

ಸಯತ್ತ್ರಮಾಣಂ ಕುರುತೆ ಲೋಕಸ್ತದನುವರ್ತತೇ ॥ ಅಂದರೆ ಶ್ರೇಷ್ಠವಾದವನು ಯಾವುದನ್ನು ಮಾಡುವನೋ ಆ ಪ್ರಕಾರವೇ ಇತರ ಜನರೂ ಮಾಡುವರು. ಆ ಶ್ರೇಷ್ಠನು ಯಾವ ಪ್ರಮಾಣವನ್ನು ನಿಶ್ಚೈಸುವನೋ ಜನರು ಅದನ್ನೇ ಅನುಸರಿಸುವರು.'' ಹೀಗೆಂದು ಪರಮಾತ್ಮನೇ ಹೇಳಿರುವಾಗ ಬಡವರು ದೊಡ್ಡವರಾದವರ ನಡೆತೆಯನ್ನು ಹಿಂಬಾಲಿಸದೆ ಹೇಗೆ ಹೋದಾರು? ಆದುದರಿಂದ ಪ್ರತಿಯೊಬ್ಬ ಮುಂದಾಳುವೂ ವಿದ್ಯಾವಂತನೂ ಬಡವರನ್ನು ಉತ್ತಮ ದಾರಿಗೆ ತರುವ ಮಾರ್ಗವನ್ನೇ ತೋರಿಸಬೇಕಾಗಿರುತ್ತದೆ-

ಮೊದಲು ಹೇಳಿದಂತೆ ಸುಖಜೀವನಕ್ಕಾಗಿಯೂ ಪೋಷಾಕುಗಳಿಗಾಗಿಯೂ ಜೂಜುಗಾರಿಕೆಗಾಗಿಯೂ ಸಿಷಾಸೇವನೆ ಮೊದಲಾದವುಗಳಿಗೆ ಸಾಲಮಾಡಿ ಸಾಲಕ್ಕಾಗಿ ಹಿರಿಯರು ಸಂಪಾದಿಸಿದ ಆಸ್ತಿಯನ್ನೇ ಕಳೆದುಗೊಂಡಂಥವರ ಚರಿತ್ರೆಯನ್ನನೇಕರು ಕೇಳಿರಬಹುದು. ಹೀಗೆ ಸಾಹುಕಾರರ ಕೈಯಲ್ಲಿ ಸಿಕ್ಕಿ ನರಳುವುದನ್ನು ಕಂಡು ಇವರನ್ನು ಉದ್ಧರಿಸುವುದಕ್ಕೊ ಎಂಬಂತೆ ಈಗಾಗಲೇ ಸಹಕಾರ ಸಂಘಗಳು ಸ್ಥಾಪಿತವಾಗಿ ಅವುಗಳಿಂದ ಜನರು ಹಲ ಕೆಲವು ಪ್ರಯೋಜನವನ್ನು ಹೊಂದುತ್ತಿದ್ದಾರೆಂದು ಹೇಳಬಹುದು. ಹೇಗಾದರೂ ಸಾಲವೆಂಬದು ಕಷ್ಟ, ಸರ್ವಜ್ಞ ಕವಿಯು ''ಸಾಲವನ್ನು ಕೊಂಬಾಗ ಹಾಲೋಗರುಂಡಂತೆ । ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ ॥ ಎಂದು ವರ್ಣಿಸಿದ್ದಾನೆ. ಇದಕ್ಕನುಗುಣವಾಗಿ ಪೂರ್ವದಲ್ಲಿ ಆಳಿದ ಹರಿಶ್ಚಂದ್ರ ಮಹಾರಾಜನು ಸಾಲದ ಋಣವನ್ನು ತೀರಿಸುವುದಕ್ಕಾಗಿ ತನ್ನ ಹೆಂಡತಿಯನ್ನೂ, ಮಗನನ್ನೂ, ಕೊನೆಗೆ ತನ್ನ ಶರೀರವನ್ನೂ ಸಹ ಮಾರಿ ಋಣವನ್ನು ತೀರಿಸಿರುವನು. ಇನ್ನು ನಮ್ಮಂಥವರ ಪಾಡೇನು?

ಸಾಲವನ್ನು ಮಾಡಲೇ ಬಾರದೆಂದು ನನ್ನ ಮತವಲ್ಲ; ಹಲ ಕೆಲವು ಸಂಗತಿಗಳಿಗೆ ಸಾಲವನ್ನು ಮಾಡಿಯೇ ತೀರಬೇಕು. ಆದರೆ ಪ್ರತಿಯೊಬ್ಬ ಸಾಲಮಾಡುವವನು ತನಗೆ ವಾಯಿದೆಗೆ ಸರಿಯಾಗಿ ನಮೂದಿಸಿದ ಮೊಬಲಗನ್ನು ಪಾವತಿಮಾಡಲು ಶಕ್ತಿ ಇದೆಯೋ ಇಲ್ಲವೋ ಎಂಬುದನ್ನು ವಿಚಾರಿಸಿ ಸಾಲವನ್ನು ಮಾಡಿದರೆ ಕೆಲವು ಸಂದರ್ಭಗಳಲ್ಲಿ ಬಹಳ ಪ್ರಯೋಜನವಾಗುವುದು. ಹೀಗೆ ಸರಿಯಾಗಿ ಪಾವತಿಮಾಡಲು ತಪ್ಪಿದವರ ಸ್ಥಿತಿಯು ಬಹಳ ಶೋಚನೀಯವಾಗಿರುತ್ತದೆ. ಕೂಟಗಳಲ್ಲಿ ಸೇರುವುದಕ್ಕೆ ಇಚ್ಛೆ ಇಲ್ಲದವನಾಗಿ, ಎಲ್ಲಿ ಸಾಲ ಕೊಟ್ಟವನು ಕೇಳುವನೋ, ಎಲ್ಲಿ ಕಾಣುವನೋ, ಎಲ್ಲಿ ಜನರ ಮುಂದೆ ಬಯ್ಯುವನೋ ಎಂಬಿವೇ ಮೊದಲಾದ ಭಯದಿಂದ ಖಿನ್ನ ಮನಸ್ಕನಾಗಿ ಮನಸ್ಸಿಗೆ ಶಾಂತಿ ಇಲ್ಲದೆ, ಆಹಾರದಲ್ಲಿ ರುಚಿ ಇಲ್ಲದೆ, ಮಲಗಲು ಇಷ್ಟವಿಲ್ಲದೆ ಸದಾ ಕಾಲದಲ್ಲಿಯೂ ಸಾಲದ ಚಿಂತೆಯಲ್ಲಿ ಮುಳುಗಿ ಬೇಸತ್ತು, ಶರೀರವು ಕೃಶವಾಗಿ ಹೋಗುವುದು. ಆಗ ತಾನು ಯಾತಕ್ಕಾಗಿ ಸಾಲಮಾಡಿದೆ? ತನ್ನ ಆಪ್ತರು ಹೇಳಿದ ಬುದ್ಧಿವಾದವನ್ನು ಕೇಳದೆ ಹೋದೆನಲ್ಲಾ? ತಾನು ಸೋಮಾರಿಯಾಗಿ ತನ್ನ ಕೆಲಸವನ್ನು ಮಾಡದೆ ಮದ್ಯಸೇವನೆಯಿಂದ ಲೋಲನಾಗಿ ವಿಧ ವಿಧ ಪೋಷಾಕುಗಳಿಂದ ಶೃಂಗರಿಸಿಕೊಂಡು ಮಿತವ್ಯಯವನ್ನೇ ತಿಳಿಯದೆ, ವಿವಿಧ ರುಚಿಕರವಾದ ಪದಾರ್ಥಗಳನ್ನು ಬಯಸಿದವನಾಗಿದ್ದದರಿಂದಲೇ ತನ್ನ ಆಸ್ತಿಯನ್ನು ಕಳಕೊಂಡೆನಲ್ಲಾ! ಇನ್ನು ತನ್ನ ಜೀವನ ಹೇಗೆ? ಮಕ್ಕಳ ಉದ್ಧಾರ ಹೇಗಾದೀತು? ಎಂಬಿವೇ ಮೊದಲಾದುವನ್ನು ಚಿಂತಿಸಿ ಸಂಕಟ ಬಂದರೆ ವೆಂಕಟರಮಣ ಎಂಬಂತೆ ದೇವರನ್ನು ಪ್ರಾರ್ಥಿಸುವನು. ಪ್ರತಿಯೊಬ್ಬ ಸಹೋದರನೂ ಇಂಥಾ ಸಂಗತಿಯನ್ನು ವಿಚಾರಿಸಿ ಈ ಸಾಲದ ಬಲೆಯಲ್ಲಿ ಸಿಲುಕದೆ ಆದಷ್ಟು ಮಿತವ್ಯಯವನ್ನು ಅರಿತು ಸಾದಾ ಜೀವನವನ್ನು ಕೈಕೊಂಡು ಸುಖವಾಗಿರಬೇಕು.

ನಮ್ಮ ದೇಶದ ಜನರು ಹೆಚ್ಚಾಗಿ ಭೂಮಿ ಕಸಬಿನವರಾದುದರಿಂದ ಅವರು ನಾಲ್ಕೈದು ತಿಂಗಳ ಕೆಲಸವನ್ನು ಮುಗಿಸಿದೊಡನೆ ತಮಗಿರುವ ಸಾರವತ್ತಾದ ಮಣ್ಣಿನಲ್ಲಿ ತಮಗೆ ಬೇಕಾದಂಥ ಕಾಫಿ, ಕಿತ್ತಳೆ, ಬಾಳೆ ನೆಡುವ ಮೊದಲಾದ ಕೆಲಸಗಳನ್ನು ಗೊತ್ತುಮಾಡಿದ ಸಮಯದಲ್ಲಿ ಮಾಡಿದರೆ ಶರೀರಕ್ಕೆ ಅಂಗಸಾಧನೆಯೂ, ಹೆಚ್ಚಿನ ಸಂಪಾದನೆಯೂ ಆಗುವದಲ್ಲದೆ ಬಳಲಿ ಬರುವಾಗ ಎಂಥಾ ಆಹಾರವಾದರೂ ರುಚಿಯಾಗಿ ಪರಿಣಮಿಸುವುದು. ಸಹೋದರರೇ! ಸಮಯವು ಮೀರಿಹೋಗಿಲ್ಲ. ಇನ್ನಾದರೂ ತಮ್ಮ ತಮ್ಮ ಸ್ವಕಾರ್ಯದಲ್ಲಿ ನಿರತರಾಗಿ ಸಮಯವನ್ನು ಜೇನು ನೊಣದಂತೆ ಕಳೆದು, ದನಗಳೇ ನಮ್ಮ ಭಾಗ್ಯಲಕ್ಷ್ಮಿಯಾಗಿರುವುದರಿಂದ ಅವುಗಳನ್ನು ಚೆನ್ನಾಗಿ ಪ್ರೀತಿಯಿಂದ ಸಾಕಿ ದಿನೇ ದಿನೇ ವೃದ್ಧಿಯಾಗಿ ದೇಶವನ್ನು ವೀರ್ಯ ಶೌರ್ಯಾದಿಗಳಿಂದಲೂ, ಸಿರಿಸಂಪತ್ತುಗಳಿಂದಲೂ ತುಂಬಿ ತುಳುಕುವಂತೆ ಮಾಡಿ ಸಾಲದಿಂದ ಮೆಲ್ಲ ಮೆಲ್ಲಗೆ ಬಿಡಿಸಿಕೊಳ್ಳಬೇಕಾಗಿ ಬೇಡುತ್ತೇನೆ.

ಹಳ್ಳಿಗಳ ಸುಧಾರಣೆಯ ಬಗೆ ಹೇಗೆ?

ಪಂಡಿತ ತಾರಾನಾಥರು ಬೆಳ್ಗಾವ್ ಜಿಲ್ಲಾ ಚಿಕ್ಕೋಡಿಯಲ್ಲಿ ನಡೆದ ರೈತರ ಪರಿಷತ್ತಿನಲ್ಲಿ ಮಾಡಿದ ಭಾಷಣ.

ಹಳ್ಳಿಯೂರುಗಳ ಸುಧಾರಣೆಯನ್ನು ಕುರಿತು ಮಾತನಾಡುವುದಕ್ಕಾಗಿ ತಾವುಗಳೆಲ್ಲ ನನ್ನನ್ನು ಕರೆದಿದ್ದೀರಿ. ಸುಧಾರಣೆಯ ಬಹು ದೊಡ್ಡ ಒಂದು ಪಾಯೆಯನ್ನು ತಾವೇ ಇಲ್ಲೀಗ ಹಾಕಿರುತ್ತೀರಿ. ಅದು ಈ ಪರಿಷತ್ತು. ಇದರಲ್ಲಿ ಮುಖ್ಯ ಭಾಗವೆಂದರೆ ಪ್ರದರ್ಶನ ಶಾಲೆ. ಮಾಡಿದವರು ತಾವಾದಿರಿ. ಆಡುವವನು ನಾನಾಗಲಾರೆ. ಆದರೂ ನನ್ನನ್ನು ಕರೆತಂದುದಕ್ಕಾಗಿ ನಾನೇನಾದರೂ ಹೇಳಬೇಕಷ್ಟೆ. ಅದಕ್ಕೆ ನನ್ನ ಮೊದಲನೆ ಮಾತೇನೆಂದರೆ ಮಣದಷ್ಟು ಆಡುವುದಕ್ಕಿಂತಲೂ ಕಣದಷ್ಟು ಮಾಡುವುದು ಲೇಸು. ಆದರೆ ಆಡುವವನಿಗೆ ಅಸಡ್ಡೆಗಳು ತೋರುವುದಿಲ್ಲ, ಬರುವುದಿಲ್ಲ. ಮಾಡುವವನಿಗೆ ಮಾತ್ರ ಇವುಗಳ ಅನುಭವವಾಗಿ ಗ್ರಾಮಸೇವೆಯಲ್ಲಿ ಕಠಿಣವಾದ ಪ್ರಮೇಯಗಳು ಇದಿರಾಗುತ್ತವೆ. ನಾನೂ ಹಳ್ಳಿಯಲ್ಲಿ, ಹಳ್ಳಿಗಾಗಿ ದುಡಿಯುವ ವ್ಯಕ್ತಿಯಾಗಿರೋಣದರಿಂದ ಇವುಗಳನ್ನು ತಕ್ಕಮಟ್ಟಿಗೆ ಬಲ್ಲೆ. ತಮ್ಮ ಕಮಿಶನರ್ ಸಾಹೇಬರು ಮೊದಲೇ ಹೇಳಿದಂತೆ ಇಂತಹ ಚಿಕ್ಕ ಪ್ರದರ್ಶನಗಳು ಅಲ್ಲಲ್ಲಿ ಆಗಾಗ್ಗೆ, ಆಗುತ್ತ ಹೋಗಬೇಕೆಂಬುದು ನಿಜ. ಇಂತಹ ಪ್ರದರ್ಶನಗಳಿಂದ ಭೂಮಿಯ ಮಾಹಿತಿ, ಬೇಸಾಯದ ಶಾಸ್ತ್ರೋಕ್ತ ರೀತಿ, ಪೈರಿಗೆ ಬರುವ ರೋಗ ಕಂಟಕಗಳನ್ನು ಅರಿತುಕೊಂಡು ಅವನ್ನು ಕಿತ್ತೊಗೆಯುವ ಪದ್ಧತಿ ಮುಂತಾದ ಲಾಭದಾಯಕ ವಿಷಯಗಳು ರೈತರಿಗೆ ತಿಳಿದು ಬಂದು ಅವರ ಆರ್ಥಿಕ ಸ್ಥಿತಿಯೂ ಬೆಳೆಯುತ್ತದೆಂಬುದೂ ನಿಜವೇ. ಈ ರೀತಿಯಾಗಿ ಅವರನ್ನು ಸುಧಾರಿಸುವ ಮಾರ್ಗಗಳೆಲ್ಲವೂ ಉತ್ತಮವೇ. ಆದರೆ ವರ್ಷಕ್ಕೊಮ್ಮೆ ಇಂತಹ ಪ್ರದರ್ಶನವನ್ನು ಮಾಡಿ ಬೇಸಾಯದ ಸುಲಭ ಶಿಕ್ಷಣವನ್ನು ಬೆಳೆಸಿದರೂ ಮುಖ್ಯವಾಗಿ ಇನ್ನೂ ಮಾಡತಕ್ಕ ಅನೇಕ ಕಾರ್ಯಗಳಿವೆ:

ಹಳ್ಳಿಗಾರನಾಗಿರುವ ನನಗೆ ಹಳ್ಳಿಯವರ ಮನೋಗತಿ ಚೆನ್ನಾಗಿ ಗೊತ್ತು. ಪ್ರತಿವರ್ಷವೂ ಸಾವಿರಾರು ರೋಗಿಗಳನ್ನೂ ಇತರ ನಾನಾ ಕಷ್ಟಗಳಿಂದ ಬಳಲುವ ಬಡಬಗ್ಗರನ್ನೂ ನಾನು ಕಾಣುತ್ತೇನೆ. ಅವರಿಗೆ ಯಥಾಶಕ್ತಿ ದುಡಿಯುತ್ತಿರುತ್ತೇನೆ. ಹಾಗೆ ದುಡಿಯುವಾಗ ಸಹಾನುಭೂತಿಯುತ ಸಾನ್ನಿಧ್ಯದಿಂದಲೇ ಅವರ ಮನಸ್ಸು ಮೂಡಿ ತೋರುತ್ತದೆ. ಅವರಿಗೆ ಬೇಕಾದ ವಿಷಯಗಳು ಅನೇಕಾನೇಕವಾಗಿವೆ. ಅವೆಲ್ಲವುಗಳನ್ನೂ ಕಂಡು ಹಿಡಿದು ಅವರನ್ನು ಸಲಹುವುದಾಗಬೇಕು. ಅವಾವವು ಎಂದು ನೋಡೋಣ:—೧. ಅವರು ಹೊಲಗದ್ದೆಗಳನ್ನು ಸುಧಾರಿಸುತ್ತ ಹೋಗುವುದಕ್ಕೆ ಅವರಿಗೆ ತಕ್ಕ ಪ್ರೋತ್ಸಾಹವಿದೆಯೋ? ೨. ಕಷ್ಟನಷ್ಟಗಳನ್ನು ವಿವರವಾಗಿ, ಅವರೇ ಕಂಡುಕೊಳ್ಳುವಂತೆ ಅವರಿಗೆ ಸಾಕಷ್ಟು ಸಾಕ್ಷರತೆ, ಶಿಕ್ಷಣ, ಇದೆಯೋ? ೩. ಹಳ್ಳಿಗಾರರಿಗೆ ಬೇಕಾದ್ದು ಆರ್ಥಿಕ ಸುಧಾರಣೆ ಒಂದೇನೋ? ಅಥವಾ ಆ ಜನರಿಗೂ ಇತರ ಮಾನವ ಜೀವಿಗಳಿಗಿರುವ ಆಕರ್ಷಣಗಳಿವೆಯೋ? ಅವುಗಳನ್ನು ಪೂರೈಸುವ ಬಗೆ ಯಾವುದು?

ಬೇಸಾಯಗಾರನಿಗೆ ಸಮಾಜದಲ್ಲಿ ತಕ್ಕ ಮಾನವು ದೊರೆಯಬೇಕು.

ಒಂದನೇ ಪ್ರಶ್ನೆಯನ್ನು ಬಿಡಿಸುವ: ಹೊಲಗದ್ದೆ ತೋಟಗಳನ್ನು ಸುಧಾರಿಸುವುದಕ್ಕೆ ಎರಡು ವಿಧವಾದ ಪ್ರೋತ್ಸಾಹಗಳು ಬೇಕು. (ಅ) ಒಬ್ಬರು ಬೆಳೆಸಿದ ಐಶ್ವರ್ಯದಲ್ಲಿ ತಮಗೂ ಸಾಕಷ್ಟು ಲಾಭವಿರಬೇಕು. (ಆ) ಮನುಷ್ಯನಿಗೆ ಬೇಕಾದ್ದು ಧನಲಾಭವೊಂದೇ ಅಲ್ಲ. ಸಮಾಜದಲ್ಲಿ ಸಾಕಷ್ಟು ಮಾನವನ್ನೂ ಅವನು ಕೋರುತ್ತಾನೆ. ಇದು ಎಲ್ಲರಿಗೂ ತಿಳಿದ ವಿಷಯವಲ್ಲವೇ? ಆದರೆ ನಮ್ಮ ಆರ್ಥಿಕ ಪದ್ಧತಿಯಲ್ಲಿ ಈ ಸಾಮಾನ್ಯ ಮಾನವ ಮನೋಗತಿಗೆ ತಕ್ಕ ತಿದ್ದುಪಡಿಗಳು ಮಾಡಲ್ಪಟ್ಟಿವೆಯೋ? ನಮ್ಮಲ್ಲಿ ವಿಶೇಷವಾಗಿ ಹೇಗಿವೆಯೆಂದರೆ,—ಬೆವರಿಟ್ಟು ದುಡಿಯುವ ರೈತನೊಬ್ಬನಾದರೆ, ಅದರ ಆದಾಯವನ್ನು ಕೂತು ತಿನ್ನುವ ಯಜಮಾನನು ಇನ್ನೊಬ್ಬ. ರೈತನಿಗೆ ಹಳ್ಳಿಯಲ್ಲಿ ಹಾಗೆ ದುಡಿಯುವುದೇ ಹಣೇಬರಹ. ಯಜಮಾನನಿಗೋ, ತನ್ನ ಪಟ್ಟಣದಲ್ಲಿ ವಿಧವಿಧವಾದ ವೈಭವಗಳು, ಆಕರ್ಷಣಗಳು! ತನ್ನ ಯಜಮಾನನಿಗಾಗಿ ಸಾಯುವ ವರೆಗೆ ತನ್ನ ರಕ್ತವನ್ನು

ನೀರು ನೀರಾಗಿ ಮಾಡಿ ಸುರಿಸಿದರೂ ಆ ರೈತನಿಗೆ ತನ್ನ ಮುತ್ತಾತನ ಕಾಲದಿಂದ ಅಂಬಲಿಯೇ ಗತಿ. ಸೊಪ್ಪಿಯ ಗುಡಿಸಲು, ಹರಕಲು ಬಟ್ಟೆ, ಒಣರೊಟ್ಟಿ- ಇವನ್ನು ದಾಟಿ ಅವನ ಹೆಜ್ಜೆ ಮುಂದಕ್ಕೆ ಬೀಳುವುದೇ ಇಲ್ಲ. ಅದೇ ಈ ದರಿದ್ರನ ದುಡಿಮೆಯಿಂದಲೇ ಲಭಿಸುವ ಯಜಮಾನ ಜಮೀನ್ದಾರನ ವೈಭವವನ್ನು ನೋಡಿ. ಆತನ ಬಂಗ್ಲೆಗಳು ಆಕಾಶ್ಕೇರುತ್ತವೆ. ಆಸ್ತಿಪಾಸ್ತಿಗಳು ಹರಡುತ್ತ ದಿಗಂತವನ್ನು ಆಲಿಂಗಿಸುತ್ತವೆ. ವಾಹನಗಳೂ ಅವುಗಳ ವೇಗಗಳೂ ಹೆಚ್ಚುತ್ತ ಹೋಗುತ್ತವೆ. ಆತನ ಸುಖಸಾಮುಗ್ರಿಗಳು ತನ್ನ ಬಡರೈತನ ದಾರಿದ್ರ್ಯದ ಆಧಾರದ ಮೇಲೆಯೇ ಬೆಳೆಯುತ್ತ ಹೋಗುತ್ತವೆ. ರೈತನು ಹೊಲಗದ್ದೆಗಳನ್ನು ಸುಧಾರಿಸಿದರೆ ಆ ಲಾಭ ಯಜಮಾನನಿಗಲ್ಲವೇ? ಅಷ್ಟೇ ಅಲ್ಲ—ಆ ಲಾಭವನ್ನು ತಾನು ಬೇಡಿದಂತೆ ಆ ರೈತನು ಯಜಮಾನನಿಗೆ ತೆತ್ತು ಹಾಕದೆ ಹೋದರೆ ಆ ರೈತನನ್ನೇ ಕಿತ್ತೊಗೆದು, ಹೆಚ್ಚಿನ ಆದಾಯವನ್ನು ಕೊಡುವ ಇನ್ನೊಬ್ಬನಿಗೆ ಆ ಯಜಮಾನನು ಕೊಟ್ಟೇ ಬಿಡುತ್ತಾನೆ. ಹೀಗಿರುವಾಗ, ಯಜಮಾನನ ಹೊಲಗದ್ದೆಗಳನ್ನು ಉದ್ಧರಿಸಿದರೆ, ಹಾಗೆ ಮಾಡಿದ ರೈತನಿಗಾದ ಲಾಭವೇನು? ಅದರ ನಿಶ್ಚಯವಿಲ್ಲದೆ ಇರುವಾಗ ಆತನಿಗಾದರೂ ತಕ್ಕ ಪ್ರೋತ್ಸಾಹವೆಲ್ಲಿಂದ ಬರಬೇಕು? ಏನೋ ಕೈಲಾಗದೆ, ಹುರುಪಿಲ್ಲದೆ, ಬಿಡಲಾರದೆ ಹೇಗೋ ದುಡಿಯುತ್ತಾನೆ ಆ ಬಡ ರೈತನು. ಆದುದರಿಂದ ತನ್ನ ಬೇಸಾಯದ ಅಭಿವೃದ್ಧಿಯ ಲಾಭವು ರೈತನಿಗೂ ಸರಿಯಾಗಿ ದೊರೆಯುವಂತೆಯೂ, ಯಜಮಾನನಿಂದ ಧಕ್ಕೆ ಹತ್ತದಂತೆಯೂ ತಕ್ಕ ಶಾಸನಗಳುಂಟಾಗಬೇಕಲ್ಲವೇ? ಆರ್ಥಿಕ ಲಾಭದ ವ್ಯವಸ್ಥೆಯು ಹೀಗಾದ ಮೇಲೆ ಬೇಸಾಯಗಾರನಿಗೆ ತಕ್ಕ ಮಾನವೂ ಸಂಘದಲ್ಲಿ ದೊರೆಯಬೇಕು. ಹಿಂದೂ ಸಮಾಜದಲ್ಲಿ ಎಲ್ಲವೂ ವರ್ಣಜಾತಿಗಳ ಕೋಟೆಯನ್ನು ಸೇರಿ ಕೂತಿದೆ. ಬೇಸಾಯಗಾರರು ಹೆಚ್ಚಾಗಿ ಶೂದ್ರರು. ಶೂದ್ರರಿಗೆ ತಕ್ಕ ಕರ್ಮ, ಬೇಸಾಯ. ಇರಲಿ—ಅದರಲ್ಲೇನು ತಪ್ಪಿಲ್ಲ. ಆದರೆ ಅದಕ್ಕೆ ತಕ್ಕ ಮರ್ಯಾದೆ ಬೇಡವೇ? ಶಾಸ್ತ್ರಪುರಾಣಗಳಲ್ಲಿ ಸ್ತ್ರೀಶೂದ್ರರಿಬ್ಬರನ್ನೂ ಅವಿವೇಕ ಅಯೋಗ್ಯತೆಗಳ ಮೂರ್ತಿಗಳೆಂದು ತೋರಿಸಲಾಗಿದೆ. ಜ್ಞಾನಕ್ಕೆ ಅನಧಿಕಾರಿಗಳನ್ನಾಗಿ ಮಾಡಿಡಲಾಗಿದೆ. ಕಾಳು ಹುಟ್ಟಿಸುವ ಶೂದ್ರನಿಗೂ, ಕೂಳು ಮಾಡಿ ಹಾಕುವ ಹೆಂಗಸಿಗೂ ಸನಾತನ ಧರ್ಮದಲ್ಲಿಂಥ ಮಾನ! ಮಹಾತ್ಮಾ ಗಾಂಧಿಯವರು ಸಹ ಭಕ್ತಿಯಿಂದ ಮನ್ನಿಸುವ ಪ್ರಸಿದ್ಧ ಹಿಂದೀ ರಾಮಾಯಣ ಬರೆದ ತುಲಸೀದಾಸನು ಸಹ

"ಢೋಲ ಗಂವಾರ ಶೂದ್ರ ಶಿಶು ನಾರಿ ।
ಯಃ ಸಬ ತಾಡನಕೇ ಅಧಿಕಾರಿ ॥

ಎಂದಿದ್ದಾನೆ. ಅಂದರೇನು?-ಢೋಲು, ಹಳ್ಳಿಗಾರ, ಶೂದ್ರ, ಶಿಶು, ಹೆಂಗಸು—ಇವರ ಹಕ್ಕು ಎಂದರೆ ಪೆಟ್ಟು ತಿನ್ನುವದೊಂದೇ ಎಂದು ಆ ಮಹಾನುಭಾವನೂ ಹೇಳಿದ್ದಾನೆ! ಹೀಗೆ ಎಲ್ಲಿ ಮಾನವೇ ಇಲ್ಲವೋ ಅಲ್ಲಿ ಮಾಡುವ ಕರ್ಮವೆಂದರೆ ಯಂತ್ರಕರ್ಮ; ಕೈಲಾಗದೆ ತಪ್ಪಿಸಿಕೊಳ್ಳಲಿಕ್ಕೂ ಆಗದೆ ಭಯಭೀತಿಗಳಿಗಾಗಿ ಮಾಡುವ ತಲೆಮೂಲೆಗಳಿಲ್ಲದ ಕೆಲಸ. ಅಂಥ ಸ್ಥಿತಿಯಲ್ಲಿ ಕೈಯಿಂದ ಕೆಲಸವನ್ನು ಮಾಡಿದರೂ ಬುದ್ಧಿಯು ಅದರಿಂದ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿಯೇ ಇರುತ್ತದೆ. ಇದರಿಂದ ಆ ಕರ್ಮರಂಗವು ಸಜ್ಜುಗೊಳ್ಳುವುದು ಹೇಗೆ? ಬೇಸಾಯಕ್ಕೆ ಮಾನವಿದ್ದರಲ್ಲವೇ ರೈತರಿಗೆ ಹಳ್ಳಿಗಳಲ್ಲಿ ಅಭಿಮಾನ ಅನುರಾಗಗಳು ಇರುವುದು? ಅವರು ದುಡಿಯುವುದೆಂದರೆ ಅಲ್ಲಿಂದ ತಪ್ಪಿಸಿಕೊಂಡು ಪಟ್ಟಣಗಳಿಗೆ ಹೋಗಲಿಕ್ಕೆ ಸಾಧ್ಯವಾಗುವ ವರೆಗೆ ಮಾತ್ರವೇ. ತಕ್ಕ ಮಾನವಿಲ್ಲದೆ ಕೆಲಸವನ್ನು ಯಾರೂ ಹುರುಪಿನಿಂದ ಮಾಡರು. ಮತ್ತಾ ಮಾನವು ಎಲ್ಲಿಂದ ಕಳೆದುಹೋಗಿದೆ? ಮೊದಲು ಧರ್ಮಗ್ರಂಥಗಳಿಂದ. ಆ ಮೇಲೆ ಗ್ರಂಥಗಳಲ್ಲಿ ಕುರುಡುನಂಬಿಕೆಯುಂಟಾಗಿ ಅದರಿಂದ ಹುಟ್ಟಿರುವ ಮನೋಗತಿಯಿಂದ, ಆ ಮೇಲೆ ಅಂಥ ಮನೋಗತಿಯಿಂದೇರ್ಪಟ್ಟ ಸಂಘಶಿಕ್ಷಣ ವಾತಾವರಣಗಳಿಂದ ಹಳ್ಳಿಗಾರರನ್ನು ಕುರಿತು ಆ ಧರ್ಮಗ್ರಂಥಗಳು ತೆಗೆದ ಉದ್ಗಾರಗಳೇ ರೈತನಿಗೆ ಮಾನ್ಯವಿಲ್ಲದಿರುವುದಕ್ಕೆ ಕಾರಣ. ಋಷಿಗಳು, ಸ್ಮೃತಿಕಾರರು, ದಾಸರು ಮುಂತಾದವರಲ್ಲಿ ಎಷ್ಟೋ ಮಂದಿ ರೈತರನ್ನೂ, ಹೆಣ್ಣನ್ನೂ ಹಳಿಸಿಟ್ಟಿದ್ದಾರೆ. ಆ ಹುಚ್ಚು ಉದ್ಗಾರಗಳಲ್ಲಿ ನಂಬಿಕೆಯಿರುವ ವರೆಗೆ ಈತನಿಗೆಲ್ಲಿಂದ ಮಾನ? ಸ್ತ್ರೀ ಶೂದ್ರರಿಗೆ ಅವಮಾನವನ್ನು ಮಾಡುವ ಧರ್ಮಗ್ರಂಥ, ಶಿಕ್ಷಣ ಸೂತ್ರಗಳ ಅಂತಸ್ತನ್ನು ಬುಡದಿಂದ ಕದಲಿಸಿ ಹಾಕಬೇಕು. ಇದು ಸಮಾಜ ಸುಧಾರಕರ ಕೆಲಸ. ಸರಕಾರದಲ್ಲಿ ತಕ್ಕ ಶಾಸನ ವ್ಯತ್ಯಾಸಗಳೂ, ಸಮಾಜದಲ್ಲಿ ತಕ್ಕ ಮನೋವೃತ್ತಿ ವ್ಯತ್ಯಾಸಗಳೂ ಆದರೇನೇ ರೈತರಿಗೆ ತಕ್ಕ ಪ್ರೋತ್ಸಾಹವೂ ದೊರೆಯುವುದು. ಈ ವ್ಯವಸ್ಥೆ ಕೂಡಲೇ ಆಗಬೇಕು.

ಹಳ್ಳಿಗರು ತಮ್ಮ ಹಕ್ಕು ಬಾಧ್ಯತೆಗಳನ್ನರಿವಂತೆ ಶಿಕ್ಷಣ ಹೊಂದಬೇಕು.

ಈಗ ಎರಡನೆ ಪ್ರಶ್ನೆ: ಇಂಡಿಯಾದಲ್ಲೆಲ್ಲಾ ಸಾಕ್ಷರತೆಯು ನೂರಕ್ಕೆ ಎಂಟರಂತೆ ಇರುವಾಗ ಹಳ್ಳಿಗಳ ಸಾಕ್ಷರತೆ ಹೇಳುವುದೇನು ಮತ್ತೆ! ಸಂತೆಯಲ್ಲಿ ತಮ್ಮ ಸಾಮಗ್ರಿಗಳನ್ನು ಮಾರಿ ಬಂದಿರುವವರಲ್ಲಿ ಸಹ ಅನೇಕರಿಗೆ ಸರಿಯಾದ ಲೆಕ್ಕ ಬರುವುದಿಲ್ಲ. ಅಂದ ಮೇಲೆ ತಮ್ಮ ಹಳ್ಳಿಯಲ್ಲದರ ಲಾಭ ನಷ್ಟಗಳ ಲೆಕ್ಕ ಹಾಕಲಿಕ್ಕೆ ಬಂದೀತೇ ಅವರಿಗೆ? ಇವೇ ತಿಳಿಯದೆ ಹೋದರೆ, ಆ ಹಳ್ಳಿಗಾರರಿಗೆ ತಮ್ಮ ಸುಖದುಃಖಗಳ ಸೂಕ್ಷ್ಮ ಕಾರಣಗಳು ಹೇಗೆ ತಿಳಿಯಬೇಕು. ಇಲ್ಲಿ ಸಾಕ್ಷರತೆ ಶಿಕ್ಷಣಗಳನ್ನು ಸ್ವಲ್ಪ ವಿವರಿಸಬೇಕು. ಇಲ್ಲಿ ಓದುಬರಹವೆಂದಲ್ಲ ನಾನಿಟ್ಟುಕೊಂಡಿರುವ ಅರ್ಥ. ಆ ಓದುಬರಹಕ್ಕೂ ತಮ್ಮ ಹಳ್ಳಿಯ ಮತ್ತದಕ್ಕೆ ಸಂಬಂಧಪಟ್ಟ ವಿಷಯಗಳೆಲ್ಲಕ್ಕೂ ಸಂಬಂಧವಿರಬೇಕು. ತಮ್ಮ ಹಳ್ಳಿಯ ಆರೋಗ್ಯ ಶಿಕ್ಷಣ, ಬೇಸಾಯ, ವ್ಯಾಪಾರ, ವ್ಯವಹಾರ, ವಿನೋದಗಳೆಲ್ಲ ಹೇಗಿವೆ, ಇವುಗಳನ್ನು ಬೆಳೆಸುವುದು ಹೇಗೆ ಮುಂತಾದ ಈ ವಿಷಯಗಳೇ ಶಿಕ್ಷಣದ ಮುಖ್ಯಾಂಗಗಳಾಗಿರಬೇಕು. ಪ್ರತಿಯೊಂದು ಹಳ್ಳಿಯೂ ಸರಕಾರಕ್ಕೆ ತೆರಿಗೆ ತೆತ್ತು ಹಾಕುತ್ತದಷ್ಟೆ. ಆ ತೆರಿಗೆಗೆ ತಕ್ಕಂತೆ ಖರ್ಚನ್ನೂ ಸರಕಾರವು ತಮ್ಮ ಹಳ್ಳಿಯ ಉದ್ಧಾರಕ್ಕಾಗಿ ಮಾಡುತ್ತದೋ ಇಲ್ಲವೋ ಎಂಬುದನ್ನು ತಿಳಕೊಳ್ಳುವ ರೀತಿಯನ್ನು ಶಿಕ್ಷಣಕ್ಕೆ ಸೇರಿಸಿಕೊಳ್ಳಬೇಕು. ತಾವೊಂದು ನೂರು ರೂಪಾಯಿ ತೆರಿಗೆ ಕೊಟ್ಟರೆ ಸೆಂಟ್ರಲ್ ಗವರ್ನಮೆಂಟಿಗೆ ಅದರಿಂದ ಎಷ್ಟು ಹಣ ಸಲ್ಲಬೇಕು, ಪ್ರಾಂತಿಕಕ್ಕೆಷ್ಟು ಮತ್ತು ಎಷ್ಟರ ಭಾಗ ತಮ್ಮ ಹಳ್ಳಿಗೇ ಮತ್ತೂ ಬಂದು ಅಲ್ಲಿ ಅದರ ಆಡಳಿತ ಮತ್ತು ಸುಧಾರಣೆಗಾಗಿ ಖರ್ಚಾಗಬೇಕು ಎಂಬ ವಿಷಯ ಒಂದು ಸೂತ್ರ ಒಂದು ನಿಯಮದ ವ್ಯವಸ್ಥೆಯಾಗಬೇಕು. ಈಗ ಇಂತಹ ಸೂತ್ರವು ಸರಿಯಾಗಿಲ್ಲದಿರೋಣದರಿಂದ ಹಳ್ಳಿಗಳು ಕೊಟ್ಟ ತೆರಿಗೆಯಿಂದ ಆಯಾ ಹಳ್ಳಿಗಳಿಗೇ ಆಗುವ ಲಾಭವು ಬಹಳ ಕಡಿಮೆಯಾಗಿದೆ. ಇಂತಹ ಸೂತ್ರಗಳನ್ನು ಹಳ್ಳಿಗಳಿಗೇ ಲಾಭದಾಯಕವಾಗುವಂತೆ ನಿಯಮಿಸುವವರಿಗೆ ಅವುಗಳ ಯೋಗ್ಯ ಶಿಕ್ಷಣದಿಂದ ಹಳ್ಳಿಗಳ ಲಾಭವನ್ನು ಮಾಡಿಸಲು ಪ್ರಯತ್ನಿಸುವವರಿಗೆ ನಮ್ಮ ಕೌನ್ಸಿಲು, ಡಿಸ್ಟ್ರಿಕ್ಟ್‌ಬೋರ್ಡು ಇತ್ಯಾದಿಗಳಲ್ಲಿ ‘‘ಓಟು’’ ಕೊಡಬೇಕು. ಆದುದರಿಂದ ಇಲ್ಲಿ ಆಡಿದ ಬರೀ ಮಾತುಗಳಿಂದಾಗದು. ಈ ವಿಷಯವನ್ನು ಕೈಕೊಂಡು ಬೆಳೆಸುವುದಕ್ಕೆ ಒಂದು ಹೊಸ ಚಳವಳಿಯೇ ಬೇಕು. ಹಳ್ಳಿಗಳಲ್ಲಿಂದ ಹಿಡಿದು ಪಟ್ಟಣಗಳಿಂದ ಹಾದು ರಾಜಧಾನಿಯ ವರೆಗೆ ಕಾರ್ಯಶಾಲೆಗಳು ಕೇಂದ್ರಗಳುಂಟಾಗಬೇಕು. ಈ ಶಿಕ್ಷಣವನ್ನು ಹಳ್ಳಿಗರಿಗೆ ಕೊಡುವುದಕ್ಕೆ ಮೊದಲು ಅನೇಕ ಯುವಕರು ಅದನ್ನು ತಾವೇ ಪಡೆದುಕೊಳ್ಳಬೇಕು. ಆದರೆ ಆ ಶಿಕ್ಷಣ ಸಂಸ್ಥೆಗಳೂ ನಮ್ಮ ಪ್ರೇಮ ವಿದ್ಯಾಪೀಠದಂತೆ ಹಳ್ಳಿಗಳಲ್ಲಿಯೇ ಹುಟ್ಟಿ ಬೆಳೆಯಬೇಕು. ಹಳ್ಳಿಯ ಸುಖದುಃಖಗಳನ್ನು ಹಳ್ಳಿಯ ವಾತಾವರಣದಿಂದಲೇ ಭೋಗಿಸಿ ತಿಳಿದುಕೊಳ್ಳುವಂತೆ ವ್ಯವಸ್ಥೆಯಾಗಬೇಕು. ಅವುಗಳ ಕುಂದುಕೊರತೆಗಳನ್ನು ಹಳ್ಳಿಗರ ಸ್ಥಿತಿಗಳಿಗೆ ಹೊಂದಿಕೊಳ್ಳುವ ರೀತಿಗಳಿಂದಲೇ ಹೋಗಲಾಡಿಸಬೇಕು. ಅಲ್ಲದೆ ದೊಡ್ಡ ದೊಡ್ಡ ಪಾಶ್ಚಿಮಾತ್ಯ ರೀತಿಗಳಿಂದಲ್ಲ. ಈ ರೀತಿಯಿಂದ ಅಲ್ಲಲ್ಲಿ ಹಳ್ಳಿಗರಿಗೆ ಸ್ವಾವಲಂಬನ, ಪರಸ್ಪರ ಸಹಾನುಭೂತಿ, ಕಾರ್ಯದಕ್ಷತೆಗಳನ್ನು ಕಲಿಸಬೇಕು. ಹಳ್ಳಿಗಳನ್ನು ಕುರಿತು ಪಟ್ಟಣದ ಶಾಲೆ ಕೊಲೇಜುಗಳಲ್ಲಿ ಉಪನ್ಯಾಸಗಳನ್ನೂ, ಪಟ್ಟಣದ ಪತ್ರ ಪತ್ರಿಕೆಗಳಲ್ಲಿ ಲೇಖನಗಳನ್ನೂ ಮಾರುದ್ದ ಬರೆಯುವ ಬಾಯಾಡಿಗರಿಂದ ಮಾತ್ರ ಆಗುವ ಕೆಲಸವಲ್ಲದು. ಹಳ್ಳಿಗರಾಗಿ ವಿವೇಕದಿಂದ ಹಳ್ಳಿಗಳಲ್ಲಿಯೇ ಬದುಕತೊಡಗುವವರಿಂದಲೇ ಮಾತ್ರ ಈ ಕಾರ್ಯವಾಗಬೇಕು. ಮಾತಿನ ಮಾಟಗಾರರಿಂದಲೇ ಆಗಲಿ, ಓಟಿನ ಬೇಟೆಗಾರರಿಂದಲೇ ಆಗಲಿ ಎಂದಿಗೂ ಆಗದ ಕೆಲಸ. ಆಚಾರ್ಯ ಪಿ. ಸಿ. ರಾಯ್ ಅವರು ಇತ್ತೀಚೆಗೆ ಬಂಗಾಳದ ಉತ್ಪನ್ನದಿಂದ ಬೊಂಬಾಯಿಗೇತಕ್ಕೆ ಲಾಭವಾಗಬೇಕೆಂಬ ಚರ್ಚೆಯನ್ನು ಲೆಕ್ಕಾಚಾರದಿಂದ ಹೂಡಲಿಲ್ಲವೇ? ಹಾಗೆಯೇ ನಮ್ಮ ಹಳ್ಳಿಯ ದುಡ್ಡು ಹಳ್ಳಿಗಳ ಉಪಯೋಗಕ್ಕೆ ಬಾರದಂತೆ ಹೊರಗೇಕೆ ಖರ್ಚಾಗಬೇಕು ಎಂಬ ಪ್ರಶ್ನೆಯು ಹಳ್ಳಿಗಳಿಂದೆದ್ದು ಪಟ್ಟಣಗಳಲ್ಲಿ ಗುಡುಗಬೇಕು.

ಈಗ ಮೂರನೇ ವಿಷಯ. ಇಲ್ಲಿಯ ವರೆಗೆ ತಮ್ಮ ಮುಂದಿಟ್ಟ ವಿಷಯಗಳಿಂದ ಹಳ್ಳಿಯವರ ಆರ್ಥಿಕ ಪರಿಸ್ಥಿತಿಯ ಸುಧಾರಣೆಯ ಮಾರ್ಗವಾಗುವುದು. ತಮ್ಮ ಅಭಿವೃದ್ಧಿಗೆ ಸಾಕಷ್ಟು ಹುರುಪೂ ಉಂಟಾಗುವುದು. ಆದರೆ ಮಾನವನಿಗೆ ಇವು ಮಾತ್ರ ಅಲ್ಲ, ಬೇಕಾದ ವಿಷಯಗಳು. ವಿಹಾರಗಳೂ ಬೇಕು, ಆಟಪಾಟಗಳೂ ಬೇಕು ಪಟ್ಟಣಗಳಲ್ಲಿರುವ ಇವು ಹಳ್ಳಿಗರನ್ನು ತಮ್ಮಲ್ಲಿಗೆ ಎಳೆದೊಯ್ಯುವ

ದೊಡ್ಡ ವಿಲೋಭನೆಗಳು. ಹಳ್ಳಿಯಲ್ಲಿ ಸಂಪಾದಿಸಿದ ಬಡತನದ ಕೂಲಿಯನ್ನು ಮತ್ತೂ ತನ್ನಲ್ಲಿಗೆ ಎಳೆಯುವ ವಿಷಯಗಳಿವು. ಇವುಗಳನ್ನು ಹಳ್ಳಿಯಲ್ಲಿಯೇ ಸ್ಥಾಪಿಸುವ ವ್ಯವಸ್ಥೆಯಾಗಬೇಕು. ಆದರೆ ಇವು ಹಳ್ಳಿಯವರಿಂದ ಹಳ್ಳಿಯವರಿಗಾಗಿಯೇ ಉಂಟಾಗಬೇಕು. ಪಟ್ಟಣದವರು ಆ ವ್ಯವಸ್ಥೆಮಾಡಿ ಹಳ್ಳಿಯ ದುಡ್ಡನ್ನು ತಾವು ಮತ್ತೂ ಪಟ್ಟಣಕ್ಕೆ ಎಳೆದೊಯ್ಯುವಂತಾಗಬಾರದು ಅಂತಹ ಸಂಸ್ಥೆಗಳಿಂದ ಹಳ್ಳಿಯವರಿಗೆ ವಿಹಾರವಾಗಬೇಕು. ವಿಹಾರದಿಂದ ಉಲ್ಲಾಸ, ಉಲ್ಲಾಸದಿಂದ ಮತ್ತೂ ಶಿಕ್ಷಣ ಕಾರ್ಯಸ್ಫೂರ್ತಿಗಳಾಗಬೇಕು. ವಿಹಾರದ ಆರ್ಥಿಕ ಲಾಭವು ಆ ಹಳ್ಳಿಗಳಲ್ಲಿಯೇ ಸಾರ್ವಜನಿಕ ಧನವಾಗಿ ಹಳ್ಳಿಯ ಉದ್ಧಾರಕ್ಕಾಗಿಯೇ ಮತ್ತೂ ಖರ್ಚಾಗಬೇಕು.

ಇಷ್ಟೆಲ್ಲಾ ಆಗಲಿಕ್ಕೆ ಜನಬೇಕು. ಜನ ಎಂದರೆ ರಜಾ ದಿನಗಳಲ್ಲಿ ಹಳ್ಳಿಗಳಿಗೆ ಹೋಗಿ ದುಡಿಮೆಯ ತೋರಿಕೆಯನ್ನು ಮಾಡುವವರಲ್ಲ. ತಮ್ಮ ಜೀವನವನ್ನು ಹಳ್ಳಿಗಳಿಗಾಗಿ ಧಾರೆಯೆರೆಯುವವರು ಬೇಕು. ಧನವೇ? ಇದೊಂದು ದೊಡ್ಡ ಸಮಸ್ಯೆ. ಇಂಡಿಯದ ಧನವು ಪೆನ್ಶನ್, ಬಡ್ಡಿಗಳ ರೂಪದಿಂದಲೇ ಕೋಟ್ಯಾನುಕೋಟಿ ಇಂಗ್ಲಾಂಡಿಗೆ ಹೋಗುತ್ತದೆ. ಸಂಬಳಗಳ ರೂಪವಾಗಿಯೂ ಹೋಗುತ್ತದೆ, ವ್ಯಾಪಾರದ ಲಾಭವಾಗಿಯೂ ಹೋಗುತ್ತದೆ. ಈ ದೊಡ್ಡ ಪ್ರವಾಸವನ್ನು ಮೊದಲು ಒಂದು ಯೋಗ್ಯ ಮಿತಿಗಿಳಿಸಿ ತಡೆಯಬೇಕು. ಇಲ್ಲವಾದರೆ ಇಲ್ಲಿ ಬೇಕಾದ ದುಡ್ಡು ಎಲ್ಲಿಂದ ಬರಬೇಕು? ಇಂಡಿಯದ ರೈತ ವರ್ಗದ ಸಾಲವೇ ಹತ್ತುಕೋಟಿಗೇರಿದೆ. ಇದರ ಭಾರವನ್ನೂ ಇಳಿಸುವ ವ್ಯವಸ್ಥೆಯಾಗಬೇಕಲ್ಲವೇ? ಈ ಎಲ್ಲ ವ್ಯವಸ್ಥೆಗಳನ್ನು ಮಾಡುವ ಸಾಹಸಿಗಳಿಗೇ 'ಓಟು' ದೊರೆಯುವಂತೆ ಹಳ್ಳಿಯವರ ಶಿಕ್ಷಣವಾಗಬೇಕು. ನಮ್ಮ ಹಳ್ಳಿಯೊಳಗಣ ಅರ್ಥ ವಿದ್ಯಾ, ಆರೋಗ್ಯ, ವಿಹಾರ ಸ್ಥಿತಿಗಳನ್ನೂ ಬೆಳೆಸಬೇಕು. ಅವುಗಳ ಧನವು ಹೊರಗೆ ಸೋರುವ ತೂತುಗಳನ್ನು ಮುಚ್ಚಬೇಕು. ಇವೆರಡನ್ನೂ ಕೈಗೂಡಿಸಿ ಕೊಡಲು ಕಷ್ಟಪಡುವವರಿಗೆ ಮಾತ್ರ ಶಾಸನ ಸಭೆಗಳಲ್ಲಿ ಹಳ್ಳಿಗರ ಬೆಂಬಲ ದೊರೆಯಬೇಕು. ಯೋಗ್ಯಾಯೋಗ್ಯದ ವಿಮರ್ಶೆಯನ್ನು ಮಾಡುವ ವಿದ್ಯೆಯ ಅಂಶವೂ ಶಿಕ್ಷಣದಲ್ಲಿರಬೇಕು. ಪರಿಷತ್ತು ಪ್ರದರ್ಶನಗಳ ಆಕರ್ಷಕ ಸಂದರ್ಭಗಳು ಇಂತಹ ವಿಚಾರಗಳನ್ನು ಬಿತ್ತುವ ಸುಕಾಲವಾಗಬೇಕು. ಹಾಗಾದರೆ ಈ ವಿಚಾರಗಳು ನೆಟ್ಟು ಪ್ರದರ್ಶನ ಪರಿಷತ್ತುಗಳ ನೀರು ಗೊಬ್ಬರಗಳಿಂದ ಬೆಳೆದು ಬಲಿತು, ಹಳ್ಳಿಗಳಲ್ಲಿ ಒಂದು ನವಯುಗವೇ ಮೊದಲಾಗುವುದು ಎಂದು ನನಗೆ ತೋರುತ್ತದೆ.

ಬಹು ಜನರ ಸತ್ತೆಯಿಂದಲೇ ರಾಜ್ಯ—ನಡೆಯುವುದಾದರೆ ದೇಶದ ಜನಸಂಖ್ಯೆಯು 100ಕ್ಕೆ ೮೬ರರಂತೆ ಜನರು ಹಳ್ಳಿಗಳಲ್ಲೇ ಇದ್ದಾರೆಂಬುದನ್ನು ಮರೆಯಬಾರದು. ಇವರನ್ನು ತಕ್ಕ ಸ್ಥಿತಿಗೇರಿಸುವ ಶಿಕ್ಷಣ ಸೇವೆಗಳೇ ಸ್ವರಾಜ್ಯ ಸಂಪಾದನೆಯ ಮೊದಲ ಮೆಟ್ಟಲು. ಈ ಎಂಭತ್ತಾರರ ಸಂಖ್ಯೆಯನ್ನು ಎಂದಿನಂತೆಯೇ ಮೂಕರನ್ನಾಗಿಟ್ಟು ಯಾವ ಸ್ವರಾಜ್ಯವೂ ಯಥಾರ್ಥವಾಗಿ ಹುಟ್ಟದು. ಹಾಗೆ ಹುಟ್ಟಿದರೆ ಅದರ ಸೂತ್ರದಾರರು ಕಪಟನಾಟಕ ಧನಪ್ರಿಯರೇ ಆಗುವರಲ್ಲದೆ ಜನಪ್ರಿಯರು ಆಗಲಿಕ್ಕಿಲ್ಲ. ಹಳ್ಳಿಗಳ ಏಳಿಗೆಯಿಂದಲೇ ಹಿಂಸಾತ್ಮಕ ಧನತ್ವವು (Capitalism) ಹೋಗಿ ಜನತ್ವವು (Socialism) ಉಂಟಾಗಬೇಕು. ಇಂಡಿಯದಲ್ಲಿ ಜನತ್ವ ಸಂಘತ್ವಗಳನ್ನು ಬೆಳೆಸಲಿಕ್ಕೆ ಹಳ್ಳಿಗಳನ್ನು ಬಿಟ್ಟರೆ ಬೇರೆ ಗತಿಯಿಲ್ಲ.

'ಬಡವರ ಬಂಧು' ಪ್ರತಿ ತಿಂಗಳ ೧೫ನೇ ತಾರೀಕಿಗೆ ಹೊರಡುವುದು.

ಮೆನೆಜರ್.

ಮುರಹರಿಯ ಮುರಲಿ

ವಾರ್ಧಿಕ ಷಟ್ಪದಿ

ತಂಬೆಲರ ತಂಪು ಮೇಣಂಬರದ ಪೆಂಪು ವರ
ದುಂಬಿಗಳ ಇಂಪು ತನಿವಣ್ಗಳುರೆ ಪೆಂಪು ಮೇಣ್
ಕಂಬುಕಂಧರನ ಕೊಳಲಿನ ಗಾನದಿಂಪು ಪ್ರೇಮಾಂಬುಧಿಯ
ಪರಮ ಸೊಂಪು ॥
ಅಂಬುಧಿಯ ತೆರೆಗಳೆಂಬೊಂದು ಸುಮಲತೆಗಳಿಂ_
ಬಂಬುಧಿಯೊಳಿರುವ ಪರಿಪರಿಯ ಸುಮ ಪರಿಕರವು
ಕಂಬುಕಂಧರಗೆ ಗಂಧಾರ್ಪಣೆಯ ಗೈವುದಕ್ಕಾರಡಿಯ
ಬರಿಸುತಡಿಗೆ ॥ ೧ ॥

ಪರಿಪರಿಯ ಹೂಗಳಂ ಕೊಯ್ಯುತ್ತ ನೇಯುತ್ತ
ಮುರಹರಿಯ ನಾಮಮಂ ನೆನೆಯುತ್ತ ಜಪಿಸುತ್ತ
ತರತರದ ಪೀತಾದಿ ವರ್ಣಗಳ ಸುಮಗಳನ್ನಾಯ್ದು
ಮಾತವಕದಿಂದ ॥
ಮುರಹರಿಗೆ ತನ್ನೊಳಿಹ ಅಂದಮಂ ಗಂಧಮಂ
ಪರಮ ಭಯಭಕ್ತಿಯಿಂದರ್ಪಿಸುವ ಕಜ್ಜಮಂ
ಬಿರಿವ ಸುಮನಗಳಂದು ತುಂಬಿಗಳಿಗಾನಂದದಿಂ ಪೇಳ್ವನೆಂಬ
ತೆರದಿ ॥ ೨ ॥

ಗರಗರಿಕೆಯಾಗರವದೆನಿಪ ದಳಗಳ ಬಿರಿಸಿ
ಪರಮ ಕತ್ತುರಿಗೆ ಮಿಗಿಲೆನಿಪ ಗಂಧವ ಪರಡಿ
ಸುರನರಾದಿಗಳ ಮನಕಮಲವನ್ನರಳಿಸುತ ಪರಮ ಸಂತಸವ
ನೀಡಿ
ಮೆರೆಯುತಿರ್ದುವು ಪೂಗಳಾನಂದಮಂ ಪರಡಿ
ಪರಿಯುತಿರ್ದುವು ಪರಮ ಸಂತಸದಿ ನದಿಗಳತಿ
ಭರದಿಂಪಲೋಡ್ಯೋಡಿ ತಳಿರೆಲೆಯ ಮೆಲುತಿರ್ದುವಾ ತುರಂಗದ
ಮರಿಗಳೂ ॥ ೩ ॥

ಮರದ ಕೊಂಬಿನೊಳೊರಗಿ ಕರದಿ ಮುರಲಿಯ ಪಿಡಿದು
ಕೊರಳಿನೊಳು ಪರಿಪರಿಯ ಹೂಮಾಲೆಯುಂ ಧರಿಸಿ
ಮುರಲಿನಾದವ ಚೆಲ್ಲಿ ಭಕುತಗೋಸಿಕರಮಂ ಕರೆಯುತಿರು
ತಿಹನು ಕೃಷ್ಣಾ ॥
ಭರದಿ ಪರಿಯುತಲಿರುವ ಲಹರಿಯ ನಿನಾದ ಮೇಣ್
ಪರಿಪರಿಯ ಪಕ್ಕಿಗಳ ಪರಮ ಸಂತಸವಾಡು
ಸಿರಿಪತಿಯ ಪ್ರೇಮಸಾಗರಮಧುವು ಮೆರೆಯುತಿದೆ ಪರಮ
ಸಂಭ್ರಮಗಳಿಂದಾ ॥ ೪ ॥

ನವದೇವತೆಗಳೊ ಮೇಣ್ ನವರಸಗಳೆಂಬಂತೆ
ನವದ್ವಾರಯುಕ್ತಮಾಗಿರುವ ನಿನ್ನಯ ಕೊಳಲ
ನವಶಕ್ತಿಯಂ ಚೆಲ್ಲಿ ನವಚೇತನವ ಬಿತ್ತಿ ಪ್ರೇಮಸಸಿಯಂ
ಬೆಳಿಸುತಾ ॥
ಪವಮಾನ ವೇಗದಿಂದವನಿಯೊಳಗಿಹ ಭಕುತ
ಪ್ರವರಕಾನಂದಮಂ ಮುರಲಿ ರವದಿಂದ ನೀ
ನವನಿಯೊಳು ಹರಸುತಲಿ ಮೆರೆಯುತನವರತ ಭಕುತಾಕರವ
ಸಂತೈಸುತಾ । ೫ ॥

ಒರೆದಿರುವೆ ಪರಮಪಾವಿತ್ರ್ಯಮೆನಿಸಿಹ ಗೀತೆ
ಮೆರೆದಿರುವೆ ನಿನ್ನ ಮಾಯೆಯ ಸಕಲ ಲೋಕದೊಳು
ಪರಮಾತ್ಮ, ಮುರಹರಿಯೆ ನರರ ವ್ಯಾಮೋಹಮಂ ಕಳೆಯು
ತಿಹ ಪರಮ ರವಿಯೆ ॥
ಬಿರಿಯಿಸೆಲೆ ದಿನಮಣಿಯೆ ಮಂಜು ಮುಸುಕಿಹ ನಭವ
ಪರಿಯಿಸೆಲೆ ಮುಸುಕಿರುವ ವ್ಯಾಮೋಹವಸುವಿನಿಂ
ಮುರಹರಿಯೆ ನಿನ್ನ ಗೋಸಿಕರಮಂ ಪಾಲಿಸುವ ಕಜ್ಜಮನ್ನೆನೆ
ಗೀಯೆಲೊ! ॥ ೬ ॥

ನೀನೆನ್ನ ಇಹಪರಂಗಳ ಪಿತನು ಮುರಹರಿಯೆ
ನೀನೆನ್ನ ಸಾಕಿಸಲಹುವ ನಲವಿನಾ ಮಾತೆ
ನೀನೆನಗೆ ಬಿಜ್ಜೆಯನ್ನಿತ್ತು ಜ್ಞಾನಾಂಬುಧಿಯ ತೋರಿಸುವ
ಪರಮ ವಾಣಿ ॥
ನೀನೆನಗೆ ಪರಿಪರಿಯ ಸಿರಿವೀವ ಸಿರಿವೆಣ್ಣು
ನೀನೆನ್ನ ಮನದಲರನರಳಿಸುವ ದಿನಮಣಿಯು
ನೀನೆನ್ನನನವರತ ಸಾಕಿ ಸಲಹುತಲಿರುವ ಸರ್ವತರ ಬಂಧು
ಕೃಷ್ಣಾ ॥ ೭ ॥

ಜಗದ ವಾತಾವರಣ ಶಾಂತಿಯಿಂ ತುಂಬಿರಲಿ
ಜಗದ ಜೀವಿಗಳು ಪರಮಾತ್ಮನಂ ಹೊಂದಿರಲಿ
ಜಗದಿ ನಲವಿನ ಜಲಾಶಯ ಪೆರ್ಚಿ ಮಾನವರು ಸಂತೈಸು
ತಿರುತಲಿರಲಿ ॥
ಜಗದಿ ಪ್ರೇಮಾಂಬುಧಿಯು ಕಣ್ಗೆ ಕಾಣುತಲಿರಲಿ
ಜಗದಿ ಸಂತಸ ರವಿಯು ಬೆಳಕ ಪಸರಿಸುತಿರಲಿ
ಜಗದಿ ನಿನ್ನಯ ಕೊಳಲ ಪರಮ ರವವದು ತುಂಜಿ ರವಿಯಾಗಿ
ಬೆಳಗುತಿರಲಿ ॥ ೮ ॥

ಶ್ರೀ ಕೃಷ್ಣತನಯ.

ಈ ಮೇಲಿನ ಕವಿಗಳು ಮುಸಲ್ಮಾನ ಬಂಧುಗಳಾದರೂ ಹಿಂದೂ–ಮುಸಲ್ಮಾನ ಭೇದವಿಡದೆ ಎಷ್ಟೊಂದು ಭಕ್ತಿಯುತ ಕವನ ಬರೆಯುತ್ತಿರುವರೆಂದು ಈ ಮೇಲಿನ ಕವನವನ್ನೋದುವವರಿಗೆ ತಿಳಿಯದಿರದು. ಮುಸಲ್ಮಾನ ಬಂಧುಗಳು ಇವರನ್ನನುಸರಿಸುವರೇ? (ಸಂ.ಬ.ಬ.)

ಯಮುನೆ.

ಲೇಖಕರು:—ಶ್ರೀ. ವಿಠ್ಠಲಸುತ, ಬೆಳಗಾಂವಿ.

ಯಮುನೆ ಗೋವಿಂದರನ್ನು ನೋಡಿ—ವಿಶೇಷತಃ ಯಮುನೆಯನ್ನು ನೋಡಿ—ಮ್ಯಾನೇಜರ ಸಿದ್ಧನಾಯಕನ ಮನವು ಕರಗಿತು. ಅವನು—ಅವರನ್ನು ತಮ್ಮಲ್ಲಿ (ಗಿರಣಿಯಲ್ಲಿ) ಊಳಿಗಕ್ಕೆ ಇಟ್ಟುಕೊಂಡನು. ಗೋವಿಂದನು ವೇಣುಪುರದ ಮೂಡಲ ದಿಕ್ಕಿಗಿರುವ ಸಿಂಧುಪೊಳೆ ಊರಿನವನು. ಈಗ ಎರಡು ಮೂರು ವರ್ಷಗಳ ಕಾಳಿನ ಇಳಿತರದ ಗೊಂದಲದಲ್ಲಿ ತೊಂದರೆಗೆ ಸಿಲುಕಿ ಸಾಹುಕಾರರ ಲಾವಣಿ ಹಣಕ್ಕಾಗಿ ತನ್ನ ಮನೆ ಹೊಲಗಳನ್ನು ಕಳೆದುಕೊಂಡನು. ಅವನು ಕೆಲದಿನ ಅಲ್ಲಿಯೇ ಕೂಲಿ ಕುಂಬಳಿ ಮಾಡಿ ಹೊಟ್ಟೆ ಹೊರೆಯುತ್ತಿದ್ದನಲ್ಲದೆ ಆ ಊರಿಗೆ ಒಳ್ಳೆಯ ರೈತನೆಂದು ಜನರಿಂದ ಮನ್ನಣೆ ಹೊಂದುತ್ತಿದ್ದ. ಆದರೆ ಆ ಸ್ಥಿತಿಯು ಮುಂದೆ ಉಳಿಯದಿದ್ದುದರಿಂದಲೂ ಅವನು ಸ್ವಾಭಿಮಾನಿಯಾಗಿದ್ದುದರಿಂದಲೂ ಹೂಮಾರಿದೆಡೆಯಲ್ಲಿ ಹುಲ್ಲುಮಾರುವ ಕಾಲ ಬಂದಿತಲ್ಲ; ಎಂದು ಅವನ ಮನವು ಮೇಲಿಂದ ಮೇಲೆ ತಳಮಳಗೊಳ್ಳುತ್ತಿತ್ತು.

ಹೀಗಿರಲು ಒಂದು ದಿನ ಗೋವಿಂದನು ಆದಾರ ಮುಖದಿಂದಲೋ ವೇಣುಪುರದ ಖುಶಾಲಚಂದರ ಅರಳೆಗಿರಣಿಯಲ್ಲಿ ಊಳಿಗದವರ ಅಗತ್ಯವಿದೆ ಎಂದು ಕೇಳಿದನು. ಅಪಮಾನಿತನಾಗಿ ಸಿಂಧುಪೊಳೆಯಲ್ಲಿರುವದಕ್ಕಿಂತಲೂ ವೇಣುಪುರಕ್ಕೆ ಹೋಗಿ ದೈವಪರೀಕ್ಷೆ ಮಾಡಬೇಕೆಂದು ಅವನು ಯೋಚಿಸಿ ತನ್ನ ಪ್ರಿಯ ಪತ್ನಿಯ .ಯಮುನೆಯ ಒಪ್ಪಿಗೆ ಪಡೆದು ಇಬ್ಬರೂ ವೇಣುಪುರಕ್ಕೆ ಬಂದರು.

ಯಮುನೆಯು ೨೦-೨೧ ವರ್ಷದ ಹರೆಯದವಳು. ಬಲು ಚೆಲುವೆ. ಮುಖದಲ್ಲಿ ಅದಾವಾಗಲೂ ಮುಗುಳ್ನಗೆಯು ಮೂಡಿರುತ್ತಿದ್ದಿತು. ಗೋವಿಂದನೂ ಅವಳಿಗೆ ಅನುರೂಪನಾಗಿದ್ದನು. ಉಭಯತರಲ್ಲಿ ಅನ್ಯೋನ್ಯ ಪ್ರೇಮವು ಬಹಳವಾಗಿತ್ತು.

ಖುಶಾಲಚಂದರ ಅರಳೆಗಿರಣಿಯ ಮ್ಯಾನೇಜರ ಸಿದ್ಧನಾಯಕನು ಮ್ಯಾನೇಜರ ಕೆಲಸಕ್ಕೆ ಯೋಗ್ಯ ಮನುಷ್ಯನಾಗಿದ್ದರೂ ಒಂದು ವಿಷಯದಲ್ಲಿ ಮಾತ್ರ ಅವನು ಸ್ವಚ್ಛಂದಿಯಾಗಿದ್ದನು. ಅದಾವುದೆಂದರೆ-ಅವನು ಸಡಿಲುಕಚ್ಚೆಯವನಾಗಿದ್ದನು.

೨

ಮ್ಯಾನೇಜರನು ತನ್ನ ಹೇತುವನ್ನು ಸಾಧ್ಯಮಾಡಿಕೊಳ್ಳುವ ಸೌಕರ್ಯಕ್ಕಾಗಿ ಗೋವಿಂದನನ್ನು ಅರಳೆಯ ಗಂಟುಗಳನ್ನು ಗಾಡಿಗಳಲ್ಲಿ ಎತ್ತಿಡುವ ಕೆಲಸಕ್ಕೂ, ಯಮುನೆಯನ್ನು ಗಿರಣಿಯ ಒಳಗಿನ ಒಂದು ಚಿಲ್ಲರೆ ಕೆಲಸಕ್ಕೂ ನೇಮಿಸಿದ್ದನು. ಯಮುನೆಯು ಗಿರಣಿಯ ಒಳಗಿನ ಕೆಲಸಮಾಡುವ ಸ್ಥಳಕ್ಕೆ ಸಮೀಪವಾಗಿ ಆತನ ಆಫೀಸು ಇದ್ದಿತು. ಗೋವಿಂದನ ಕೆಲಸದಲ್ಲಿಯ ಅನೇಕ ತಪ್ಪುಗಳನ್ನು ಅವನು ಯಮುನೆಯ ಮುಖವನ್ನು ನೋಡಿ ತುಂಬಾ ಕ್ಷಮಿಸುತ್ತಿದ್ದನು. ಯಮುನೆಗಂತೂ ಅವನು ಎಂದೂ ಕಾಟ ಕೊಟ್ಟಿರಲಿಲ್ಲ. ಅದೂ ಅಲ್ಲದೆ ಈಗ ಆರು ತಿಂಗಳಲ್ಲಿ ಯಮುನೆ—ಗೋವಿಂದರ ಸಂಬಳದಲ್ಲಿ ಇತರ ಕೂಲಿಗಳಿಗಿಂತ ಹೆಚ್ಚು ಏರಿಕೆ ಮಾಡಿದ್ದನು. ಅದಕ್ಕಾಗಿ ಅವರಿಬ್ಬರೂ ಮ್ಯಾನೇಜರನು ತುಂಬಾ ದೊಡ್ಡ ಮನಸ್ಸಿನವನು ಎಂದು ನಂಬಿದ್ದರು. ಯಮುನೆಯು ಕೆಲಸಮಾಡುತ್ತಿರುವಲ್ಲಿ ಇನ್ನೂ ಅನೇಕ ಹೆಂಗಸರು ಕೆಲಸಕ್ಕಾಗಿ ಇದ್ದರು. ಯಮುನೆಯ ಹೆಚ್ಚಳಕ್ಕಾಗಿ ಕೆಲವರು ನಗುತ್ತಲೂ ಕೆಲವರು ಉರಿಯುತ್ತಲೂ ಇದ್ದರು. ಈ ಎಲ್ಲ ಸ್ತ್ರೀ ಕೆಲಸಗಾರರ ಮೇಲೆ ಲಕ್ಷ್ಮೀ ಎಂಬವಳು ಅಧಿಕಾರಿ. ಅವಳು–"ನೀನು ದೈವವಂತಿ" ಎಂದು ಯಮುನೆಗೆ ಅದೇಕೊ ಮೇಲಿಂದ ಮೇಲೆ ಹಾಸ್ಯಮಾಡುತ್ತಿದ್ದಳು.

ಮ್ಯಾನೇಜರ ಸಿದ್ಧನಾಯಕನಾದರೂ ಆಗಾಗ ಬಂದು ಯಮುನೆಯ ಯೋಗಕ್ಷೇಮವನ್ನು ಕೇಳಿ ಅವಳೊಡನೆ ತುಸು ಸವಿ ಮಾತನಾಡಿ ಹೋಗುತ್ತಿದ್ದನು. ಇವೆಲ್ಲವುಗಳ ಇಂಗಿತವನ್ನು ಸರಳ ಮನಸ್ಸಿನವಳಾದ ಯಮುನೆಯು ಅರಿಯದೆ ಹೋದಳು. ಅವಳು ಮ್ಯಾನೇಜರನು ಚಲೋ ಮನುಷ್ಯನೆಂದೂ ತಮಗೆ ಉಪಕಾರ ಕರ್ತೃವೆಂದೂ ಮಾತ್ರ ಭಾವಿಸಿದ್ದಳು.

ಹೀಗೆ ಯಮುನೆ-ಗೋವಿಂದರ ಸಂಸಾರವು ಒಳ್ಳೆಯ ಸ್ಥಿತಿಯಲ್ಲಿ ನಡೆಯುತ್ತಿದ್ದಿತು. ಯಮುನೆಯು ಗೃಹಕೃತ್ಯದಲ್ಲಿ ಬಲ್ಲವಳಾಗಿದ್ದುದರಿಂದ ವೆಚ್ಚ ಸಾಗಿಸಿಕೊಂಡು ತಮ್ಮ ಗಳಿಕೆಯಲ್ಲಿ ಪ್ರತಿ ತಿಂಗಳು ತಪ್ಪದೆ ತುಸು ಉಳಿಸಿಕೊಳ್ಳುತ್ತಿದ್ದಳು.

ಆದರೆ ದುಃಖದ ಮುಂದೆ ಸುಖವೂ ಸುಖದ ಮುಂದೆ ದುಃಖವೂ ಬಂದೇ ಬರುವವು—ಎಂಬಂತೆ ಅವರ ಈ ಸುಖಕ್ಕೆ ಮಣ್ಣೆರಚುವ ಕಾಲವೂ ಒಮ್ಮೆ ಬಂದಿತು. ಗಿರಣಿಯ ಒಡೆಯರು ಕೂಲಿಗಳ ಸಂಬಳದಲ್ಲಿ ೧೦೦ಕ್ಕೆ ೨೫ರಂತೆ ಕಡಿತಮಾಡಬೇಕೆಂದು ಗೊತ್ತುಮಾಡಿದರು. ಅದಕ್ಕೆ ಈಗಿನ ಅಗ್ಗಳತೆಯೇ ಕಾರಣವೆಂದು ಆಧಾರವಿತ್ತರು. ಗಿರಣಿಯಲ್ಲಿಯ ನೂರಿನ್ನೂರು ಸಂಬಳದವರಲ್ಲಿ ೧೦೦ಕ್ಕೆ ೧೦ರಂತೆ ಕಡಿತಮಾಡಲಾಗಿತ್ತು. ಆದರೆ, ಅವರಿಗೆ ಉಂಡುಟ್ಟು ಉಳಿತಾಯದಲ್ಲಿ ಮಾತ್ರ ಕಡಿಮೆಯಾಯಿತಲ್ಲದೆ ಊಟ ಬಟ್ಟೆಬರೆಗಳಿಗೇನೂ ಕಡಿಮೆಯಾಗುತ್ತಿರಲಿಲ್ಲ. ಆದರೆ ಮೊದಲೆ ಊಟ ಉಡಿಗೆಗಳಿಗೆ ಪೂರಾ ಗತಿಯಿಲ್ಲದ ಕೂಲಿಗಳಿಗೆ ಬಹಳ ಹಾನಿಯಾಯಿತು. "ದೈವೋ ದುರ್ಬಲಘಾತಕಃ"

ಕೂಲಿಗಳಲ್ಲಿ ಗೊಂದಲವೆದ್ದಿತು. ಕಡಿತ ಬೇಡವೆಂದು ಅವರು ಪರಿಪರಿಯಾಗಿ ಗಿರಣಿಯೊಡೆಯರಿಗೆ ಹೇಳಿಕೊಂಡರು. ಆದರೆ ಕೇಳುವವರಾರು? ಅವರ ಆ ಹೇಳಿಕೆ ಕೇಳಿಕೆಗಳೆಲ್ಲ ಗಾಳಿಗಂಟಾದವು. ಕಡೆಗೆ ಕೂಲಿಗಳು ನಿರಾಶರಾದರು. ಅನಿವಾರ್ಯ ಪ್ರಸಂಗವೆಂದು ಅವರು ತಮ್ಮಲ್ಲಿ ಸಂಘಟನೆ ಮಾಡಿಕೊಂಡು ಒಂದು ದಿನ ಕಟ್ಟು (strike) (ಸಂಪು) ಮಾಡಿದರು.

೩

ಗಿರಣಿಯ ಒಡೆಯರೂ ಮ್ಯಾನೇಜರರೂ ಕೂಟ ಕೂಡಿಸಿದರು. ಈ ಕಟ್ಟನ್ನು ಕುರಿತು ಈ ಉನ್ಮತ್ತರಾದ ಕೂಲಿಗಳನ್ನು ಹೊರದೂಡಬೇಕೆಂದೂ ಹೊಸಬರನ್ನು ಇಟ್ಟುಕೊಳ್ಳಬೇಕೆಂದೂ ಗೊತ್ತುಮಾಡಲಾಯಿತಲ್ಲದೆ ಸಂಬಳ ಕಡಿತದಲ್ಲಿ ಏನೂ ಕಡಿಮೆಮಾಡಲಿಲ್ಲ. ಕೇವಲ ತಮ್ಮ ಕೆಲವರ ಹಿತಕ್ಕಾಗಿ ನೂರಾರು ಬಡಬಗ್ಗರನ್ನು ತುಳಿಯಲು ಹೇಸದಾದರು. ಈ ಕಾಲದಲ್ಲಿ ಉನ್ಮತ್ತರಲ್ಲ; ಆದರೆ ಒಳ್ಳೆಯವರು! ಎಲ್ಲಿಯೂ ಅವರಿಗೇ ಮಾನ!

ಮರುದಿನವೆ ಎಲ್ಲ ಕೂಲಿಗಳನ್ನು ಕೆಲಸದಿಂದ ಕಡಿಮೆಮಾಡಿದುದಾಗಿ ನೋಟೀಸನ್ನು ಗಿರಣಿಯ ಹೆಬ್ಬಾಗಿಲಿಗೆ ಅಂಟಿಸಿದುದಾಯಿತು. ಕೂಲಿಗಳು ಅದನ್ನು ಕಂಡು ನಿರಾಶರಾದರು. ಉದ್ವೇಗಗೊಂಡು ಕಡೆಗೆ ಸಂತೃಪ್ತರಾದರು. ಅವರು ಗಿರಣಿಯೊಡೆಯರ ಈ ಕೃತಿಗೆ ಪ್ರತ್ಯುತ್ತರವೆಂದು ಸತ್ಯಾಗ್ರಹಮಾಡಬೇಕೆಂದು ನಿಶ್ಚಯಿಸಿದರು.

ಇದಾದ ಮೂರನೇ ದಿನದಿಂದ ಗಿರಣಿಯ ಏಜಂಟರ ವತಿಯಿಂದ ಹೊಸ ಕೂಲಿಗಳು ಗಿರಣಿಗೆ ಬರತೊಡಗಿದರು. ಅದಕ್ಕೆ ಹಳೆಯ ಕೂಲಿಗಳು ತಡೆಮಾಡಹತ್ತಿದರು. ಆದರೆ ಗಿರಣಿಯೊಡೆಯರು ದಯಾಳುವಾದ ಸರಕಾರಕ್ಕೆ ಬರೆದುಕೊಂಡು ಪೋಲೀಸು ಪಡೆಯಿಂದ ಕಟ್ಟಿನ ಕೂಲಿಗಳ ಮುಖಂಡರನ್ನು ಕಾರಾಗಾರಕ್ಕೆ ಅಟ್ಟಿದರು. ಉಳಿದ ಕಟ್ಟುಗಾರರನ್ನು ದನಗಳಂತೆ ದೊಣ್ಣೆಯೇಟುಗಳಿಂದ ಹೊಡೆದು ಓಡಿಸಿದರು. ಕಡೆಗೆ ಕಟ್ಟು ಮುರಿಯಿತು. ಗಿರಣಿಯೊಡೆಯರು ಪೋಲೀಸರ ಈ ಶೂರತನ(?)ಕ್ಕಾಗಿ ಉಡುಗರೆಗಳನ್ನು ಕೊಟ್ಟರಲ್ಲದೆ, ಸರಕಾರದ ಸಹಾಯವನ್ನೂ ಕೊಂಡಾಡಿದರು.

ಗೋವಿಂದನೂ ಈ ಕಟ್ಟಿನಲ್ಲಿ ಭಾಗಿಯಾಗಿದ್ದನು. ಅವನು ಕಟ್ಟಿಗೆ ಮೊದಮೊದಲು ಒಪ್ಪಿರಲಿಲ್ಲ, ಆದರೆ ಕೂಲಿಗಳ ಉಪದೇಶದ ಸೆಳವಿಗೆ ಸಿಲುಕಿ ಅವನೂ ತನ್ನ ಕೆಲಸ ಕಳೆದುಕೊಳ್ಳಬೇಕಾಯಿತು. ಹೆಂಗಸರು ಮಾತ್ರ ಈ ಕಟ್ಟಿಗೆ ಸೇರಿಕೊಳ್ಳಲಿಲ್ಲವಾದುದರಿಂದ ಯಮುನೆಯ ಕೆಲಸಕ್ಕೆ ಸಂಚಕಾರ ಬರಲಿಲ್ಲ.

ಈಗ ಗೋವಿಂದನ ಸಂಸಾರವು ಯಮುನೆಯ ದುಡಿತದ ಸಂಬಳದ ಮೇಲೆಯೇ ಹಾಗೂ ಹೀಗೂ ನಡೆಯುತ್ತಲಿತ್ತು. ಗೋವಿಂದನು ಪೂರ್ವ ಪರಿಸ್ಥಿತಿಯನ್ನು ತಂದುಕೊಳ್ಳಲೆಂದು ಬೇರೆ ಕಡೆಗೆ ಉದ್ಯೋಗಗಳನ್ನು ಹುಡುಕತೊಡಗಿದನು. ಆದರೆ ಕಟ್ಟುಗಾರರಲ್ಲಿ ಇವನೂ ಒಬ್ಬನು, ಎಂದು ಯಾರೂ ಆತನನ್ನು ಊಳಿಗಕ್ಕೆ ಇಟ್ಟುಕೊಳ್ಳದಾದರು. ಹೀಗಾಗಿ ಕುಂಟೆತ್ತಿನ ಗಾಡಿಯಂತೆ ಅವರ ಸಂಸಾರವು ತೊಂದರೆಗೊಳಗಾಯಿತು.

ಈ ಸಂಸಾರದ ತೊಂದರೆಯ ಪಡಿಚಿತ್ರವು ಯಮುನೆಯ ಮುಖದಲ್ಲಿಯೂ ಚಿತ್ರಿತವಾಗದಿರಲಿಲ್ಲ. ಅವಳ ಮುಖದ ನಗೆಯೂ ಕೆಲಸದ ಚಟುವಟಿಕೆಯೂ ಕಡಿಮೆಯಾದುವು.

೪

ಒಂದು ದಿನ ಯಮುನೆಯು ಗಿರಣಿಯಲ್ಲಿ ನಿತ್ಯದಂತೆ ತನ್ನ ಕೆಲಸ ಮಾಡುತ್ತಿರಲು, ಅವಳ ಮೇಲ್ವಿಚಾರಕಳಾದ ಲಕ್ಷ್ಮಿಯು ಅಲ್ಲಿಗೆ ಬಂದಳು. ಲಕ್ಷ್ಮಿಯು ಒಳ್ಳೆ ಪಾತಾಳಯಂತ್ರಿಯು. ಯಮುನೆಯ ಗಂಡನನ್ನು ಗಿರಣಿಯಿಂದ ಕಟ್ಟಿನ ಕಾರಣದಿಂದ ಹೊರದೂಡಿದ ಮೇಲೆ ಅದರ ಪರಿಣಾಮವು ಯಮುನೆಯ ಮೇಲೆ ಹೇಗೆ ಹೇಗೆ ಆಗುತ್ತಿದೆಯೆಂಬುದನ್ನು ಅವಳು ತರ್ಕಿಸುತ್ತಲಿದ್ದಳು. ಯಮುನೆಯು ಮೊದಲಿನಂತೆ ಉತ್ಸಾಹಭರಿತೆಯಿಲ್ಲವೆಂದೂ ಅವಳು ಉದಾಸೀನಳೂ ದುಃಖಿತಳೂ ಆಗಿರುವಳೆಂದೂ ಇದಕ್ಕೆ ಪ್ರಪಂಚದ ತೊಂದರೆಯೇ ಬಹುಶಃ ಕಾರಣವೆಂದೂ ಅವಳು ಅರಿತಿದ್ದಳು. ತನ್ನ ಕಾರ್ಯಸಾಧನೆಗೆ ಇದೇ ಒಳಿತಾದ ವೇಳೆಯೆಂದು ಬಗೆದು ಪ್ರಸಂಗ ದೊರೆತಲ್ಲಿ ಯತ್ನಿಸಿ ನೋಡಲು ಅವಳು ಉತ್ಸುಕಳಾಗಿದ್ದಳು.

ಅವಳು ಯಮುನೆಯ ಬಳಿಗೆ ಬಂದು ಅವಳ ಮುಖವನ್ನು ನೋಡಿ ಕಳವಳ ಪಟ್ಟವಳಂತೆ ನಟಿಸಿ . . . ಇದೇನು ಯಮೂ, ಈಗೀಗ ನಿನ್ನ ಮುಖವೇಕೆ ಬಾಡಿರುವುದು? ಮೈಯಲ್ಲಿ ಜಾಡ್ಯವೇ?" ಎಂದು ಕೇಳಿದಳು.

ಸರಳ ಮನಸ್ಸಿನವಳಾದ ಯಮುನೆಗೆ ಇವಳ ಒಳಗುಟ್ಟು ಗೊತ್ತಿರಲಿಲ್ಲ. ಅವಳು ಲಕ್ಷ್ಮಿಯ ಕಳವಳದ ನುಡಿಗಳನ್ನು ಕೇಳಿ ಇವಳು ನಿಜವಾಗಿಯೂ ತನ್ನನ್ನು ಪ್ರೀತಿಸುವಳೆಂದು ಬಗೆದು "ಅಮ್ಮಾ ಏನು ಹೇಳಲಿ? ಕಟ್ಟಿನಲ್ಲಿ ಸೇರಿದನೆಂದು ಒಡೆಯರು ಅವ (ಗೋವಿಂದ)ನನ್ನು ಗಿರಣಿಯಿಂದ ದೂಡಿದರು. ಈಗ ಪ್ರಪಂಚಕ್ಕೆ ತೊಂದರೆಯಾಗಿದೆ. ಇನ್ನು ನಮ್ಮ ಗತಿಯೇನೆಂದು ಚಿತ್ತವು ಚಂಚಲವಾಗಿದೆ; ಮತ್ತೇನೂ ಇಲ್ಲ" ಎಂದು ಉಸುರ್ಗರೆದಳು.

"ಇಲ್ಲಿ ಇಲ್ಲದಿದ್ದರೆ ಇಲ್ಲ; ಮತ್ತೆಲ್ಲಿಯಾದರೂ ಬೇರೆ ಊಳಿಗವನ್ನು ಅವನು ಹುಡುಕಲಿಲ್ಲವೇ?"

"ಹುಡುಕಿದನು; ಆದರೆ ಯಾರೂ ಅವನನ್ನು ಕಟ್ಟಿನ ಸಂಬಂಧದಿಂದ ಇಟ್ಟುಕೊಳ್ಳಲಿಲ್ಲ. ಲಕ್ಷ್ಮಮ್ಮಾ! ಆ ಕಟ್ಟಿನ ವೇಳೆ ನಾನು, ಗಂಡನಿಗೆ "ನೀನು ಕಟ್ಟಿನಲ್ಲಿ ಸೇರಬೇಡ; ನಮ್ಮ ಮ್ಯಾನೇಜರ ಸಾಹೇಬರು ನಮ್ಮ

ಸಂಕಟಕಾಲದಲ್ಲಿ ನಮ್ಮನ್ನು ಬದುಕಿಸಿಕೊಂಡಿದ್ದಾರೆ. ಉಂಡ ಮನೆಗೆ ಎರಡೆಣಿಸಿದಂತೆ ಆಗುವದು" ಎಂದು ಪರಿಪರಿಯಾಗಿ ಹೇಳಿದೆನು. ಆದರೆ ಅವನು ಆ ಕಟ್ಟುಗಾರರ ಸೆಳವಿಗೆ ಬಿದ್ದು ನನ್ನ ಮಾತನ್ನು ಅಲ್ಲಗಳೆದನು. ಈಗೇನು ಮಾಡಬೇಕು ಎಂಬುದು ತಿಳಿಯದಾಗಿದೆ."

"ಯಮೂ, ಏನು, ನಿನ್ನ ಸಂಸಾರವು ಇಷ್ಟು ತೊಂದರೆಗೀಡಾಗಿದೆಯೆ? ಚು, ಚು."

"ನಿಜವಾಗಿ ಹೇಳುವುದೆಂದರೆ ನಾವಿಬ್ಬರು ಈಗ ಎಂಟು ದಿನಗಳಿಂದ ಒಪ್ಪೊತ್ತು ಇದ್ದೇವೆ" ಎಂದು ಹೇಳುವಾಗ ಯಮುನೆಯ ಕಣ್ಣುಗಳು ಅಶ್ರುಪೂರ್ಣವಾದವು ಇಂತಹ ದುಃಖದ ಅನುಭವವಿದ್ದವರಿಗೆ ಮಾತ್ರ ಯಮುನೆಯ ಮನಸ್ಥಿತಿಯು ತಿಳಿಯಬಹುದಲ್ಲದೆ ಮೃಷ್ಟಾನ್ನವನ್ನು ತಿಂದು ಮೊಳದೆತ್ತರ ಗಾದಿಯ ಮೇಲೆ ಉರುಳಾಡುವ ಅಣ್ಣಗಳಿಗೆ ಅದು ಹೇಗೆ ಗೊತ್ತಾಗುವದು?

ಲಕ್ಷ್ಮಿಯು ಮನದಲ್ಲಿ ಹಿಗ್ಗಿದಳು. ಈ ಮಿಕವು ಇನ್ನು ಬಲೆ ಬೀಳಲು ತಡವಿಲ್ಲೆಂದೂ ಅವಳು ಇದೇ ಸಮಯವು ತನ್ನ ಕಾರ್ಯಸಾಧನೆಗೆ ಅನುಕೂಲವೆಂದೂ ಬಗೆದು ಬೆನ್ನ ಮೇಲೆ ಕೈಯಾಡಿಸಿ, "ಯಮುನೇ, ಏನು ಹುಚ್ಚಿಯೆ ನೀನು? ಇಷ್ಟಾದರೂ ನೀನು ನನಗೆ ನಿನ್ನ ಪರಿಸ್ಥಿತಿಯನ್ನು ಒಮ್ಮೆಯಾದರೂ ತಿಳಿಸಲಿಲ್ಲವಲ್ಲ? ನಾನೇನು ಹೊರಗಿನವಳೆ ಮುಚ್ಚಿಡಲಿಕ್ಕೆ? ನನಗೆ ಆಗಲೆ ತಿಳಿಸಿದ್ದರೆ ನಮ್ಮ ಮ್ಯಾನೇಜರ ಸಾಹೇಬರಿಗೆ ತಿಳಿಸಿ ನಿನ್ನ ಸಂಕಟವನ್ನು ದೂರಮಾಡುತ್ತಿದ್ದೆನು."

"ಅಮ್ಮಾ, ಇದೇನು ಹೇಳುವಿರಿ ನೀವು? ಕೆಲಸದಿಂದ ದೂಡಿದವನನ್ನು ಮತ್ತೆ ಸಿದ್ಧನಾಯಕರು ಅದು ಹೇಗೆ ತಿರುಗಿ ತೆಗೆದುಕೊಳ್ಳುತ್ತಿದ್ದರು?"

"ಛೀ! ಹುಚ್ಚಿ, ಇದೋ ನೋಡು; ನಮ್ಮ ಮ್ಯಾನೇಜರರು ಒಳ್ಳೇ ದಯಾಳುಗಳೆಂಬುದು ನೀನು ಅರಿತಿಲ್ಲವೇ?"

"ಅಹುದಮ್ಮಾ! ಅವರು ದಯಾಳುಗಳಾಗಿದ್ದಾರೆಂತಲೆ ನಮ್ಮಿಂದ ಅನೇಕ ತಪ್ಪುತಡೆಗಳಾಗುತ್ತಿದ್ದರೂ ಅವೆಲ್ಲವನ್ನೂ ಅವರು ಕ್ಷಮಿಸುತ್ತ ಬಂದಿರುತ್ತಾರೆ. ಇದನ್ನು ನಾನು ಹೇಗೆ ಮರೆವೆನು? ಆದರೂ ನಮ್ಮವನೆ ತಪ್ಪಿತನಾಗಿರುವಾಗ ನಾನು ನಮ್ಮವನಿಗೆ ಮತ್ತೆ ಕೆಲಸ ಕೊಡಿರೆಂದು ಹೇಗೆ ಮುಖವೆತ್ತಲಿ?

"ಇರಲಿ ಯಮೂ, ನಿನ್ನ ಗಂಡನಿಗೆ ಮತ್ತೆ ಕೆಲಸ ಬೇಕಲ್ಲವೆ? ಈ ಹೊತ್ತು ಸಂಜೆಯ ಮುಂದೆ ನನ್ನ ಮ್ಯಾನೇಜರ ಸಾಹೇಬರಿಗೆ ನಿನ್ನ ಸಂಗತಿಯನ್ನು ಸೂಚಿಸುವೆನು; ನೀನು ಚಿಂತಿಸಬೇಡ."

ಲಕ್ಷ್ಮಿಯ ಈ ನುಡಿಗಳನ್ನು ಕೇಳಿ ಯಮುನೆಗೆ ಹಿಡಿಸಲಾರದಷ್ಟು ಆನಂದವಾಯಿತು. ಅವಳು—"ಲಕ್ಷ್ಮಮ್ಮಾ! ನೀನು ಅಷ್ಟು ಮಾಡಿಸಿದೆಯೆಂದರೆ ನಮ್ಮ ಬಡವರ ಕಲ್ಯಾಣಮಾಡಿದ ಪುಣ್ಯವು ನಿನಗೆ ಬರುತ್ತದೆ" ಎಂದು ಮನಃಪೂರ್ವಕವಾಗಿ ನುಡಿದಳು. ಪಾಪ! ಸರಳ ಹೃದಯದ ಯಮುನೆ!

ಲಕ್ಷ್ಮಿಯು ಮನದಲ್ಲಿ "ಮಿಕವು ಬಲೆಗೆ ಬಿದ್ದಿತು" ಎಂದು ಹಿಗ್ಗಿದಳು. ಅಕ್ಕಪಕ್ಕದ ಅಲ್ಲಿಯ ಕೆಲ ಹೆಂಗಸರು ಮಾತ್ರ ತಮ್ಮತಮ್ಮೊಳಗೆ ಕಣ್ಣುಸನ್ನೆ ಮಾಡಿದರು. ಅದೇಕೋ?

೫

ಯಮುನೆಯು ಇದಾವ ಸುದ್ದಿಯನ್ನೂ ಆ ದಿನ ಗೋವಿಂದನಿಗೆ ಹೇಳಲಿಲ್ಲ. ಅವಳು ಗೋವಿಂದನನ್ನು ಮತ್ತೆ ಕೆಲಸದ ಮೇಲೆ ತೆಗೆದುಕೊಳ್ಳುವದು ನಿಶ್ಚಿತವಾದ ಮೇಲೆಯೆ ಇದೆಲ್ಲವನ್ನು ಅವನಿಗೆ ಹೇಳಿ ಅವನನ್ನು ಆಶ್ಚರ್ಯಚಕಿತನನ್ನಾಗಿ ಮಾಡಬೇಕೆಂದು ಬಗೆದಿದ್ದಳು. ಮರುದಿನ ಅವಳು ಕೆಲಸಕ್ಕೆ ಬಂದೊಡನೆಯೇ ಲಕ್ಷ್ಮಿಗೆ ಭೆಟ್ಟಿಯಾಗಿ "ಮ್ಯಾನೇಜರ ಸಾಹೇಬರು ಏನೆಂದರು?" ಎಂದು ಕೇಳಿದಳು.

ಲಕ್ಷ್ಮಿಯು ಏನು ಹೇಳಬೇಕೆಂಬುದನ್ನು ಸಿದ್ಧನಾಯಕನೊಡನೆ ಈ ಮೊದಲೆ ಯೋಚಿಸಿಟ್ಟಿದ್ದಳು. ಅವಳು— "ಯಮೂ, ನಿನ್ನ ದೈವವು ಚೆನ್ನಾಗಿದೆ. ಅವರಿಗೆ ನೀನೆ ಭೆಟ್ಟಿಯಾಗಬೇಕಂತೆ?"

"ಅದೇಕೆ? ನೀವು ಹೇಳಿದರೆ ಆಗಲಿಲ್ಲವೆ?"

"ನಾನೂ ಅವರಿಗೆ ಚೆನ್ನಾಗಿ ಹೇಳಿರುವೆನು. ಆದರೆ ಅವರು 'ಯಾರ ಕೆಲಸವೊ, ಅವರು ಹೇಳಬಹುದು, ನೀನೇಕೆ ನಡುವೆ?' ಎಂದು ನನಗೆ ಮೊದಲು ಬೆದರಿಸಿದರು. ಆದರೂ ನಿನ್ನಿನ ನನ್ನ ಅವರ ಮಾತುಗಳ ಮೇಲಿಂದ ವಿಚಾರಿಸಲು ಅವರು ನಿನ್ನ ಮೇಲೆ ಮೊದಲಿನಂತೆಯೇ ದಯವಿಟ್ಟಿರುವರೆಂದೂ ನೀನು ಕೇಳಿದ ಕೂಡಲೆ ನಿನ್ನ ಕೆಲಸ ಮಾಡಿಬಿಡುವರೆಂದೂ ನನಗೆ ನಂಬುಗೆಯಾಗಿದೆ."

"ಹೀಗೆಯೇ ಒಳ್ಳೇದು; ಇದಕ್ಕೆ ಮುಂದೆ ನಾನೇನು ಮಾಡಲಿ?"

ಈ ಹೊತ್ತು ಗಿರಣಿಯು ಬಿಟ್ಟ ಮೇಲೆ ನೀನು ಅವರ ಕೋಣೆಗೆ ಹೋಗು. ಅವರಿಗೆ ನಿನ್ನ ಪರಿಸ್ಥಿತಿಯನ್ನು ಒಳ್ಳೇ ಕಳಕಳಿಯಿಂದ ಹೇಳಿಕೊಳ್ಳು, ಅಂದರೆ ನಿನ್ನ ಕೆಲಸವಾಯಿತೆಂದೇ ತಿಳಿ."

"ಲಕ್ಷ್ಮಮ್ಮಾ ನಾನಿದುವರೆಗೆ ಅವರ ಕೋಣೆಯನ್ನು ಪ್ರವೇಶಿಸಿಲ್ಲ. ಈಗ ಹೋಗಲು ತುಸು ಆದೇಕೋ ಮನಸು ಚಂಚಲವಾಗುತ್ತಿದೆ"

ನೀನು ನಿಜವಾಗಿಯೂ ಹುಚ್ಚಿ, ಏನೆ, ಅವರು ಹೇಗಿರುವರೆಂಬುದು ನಿನಗೆ ಗೊತ್ತಿಲ್ಲವೇ? ನೀನೇನು ಚಿಂತಿಸುವ ಕಾರಣವಿಲ್ಲ. ಅಲ್ಲದೆ ನಾನು ಅಲ್ಲಿಯೇ ಬಳಿಯಲ್ಲಿಯೇ ಇರುವೆನು; ತಿಳಿಯಿತೇ?

ಯಮುನೆಯು ಒಪ್ಪಿಕೊಂಡಳು ಲಕ್ಷ್ಮಿಯು ತನ್ನ ಕೆಲಸಕ್ಕೆ ಹೊರಟು ಹೋದಳು.

ಗಿರಣಿಯು ಬಿಟ್ಟಿತು. ಕೂಲಿಗಳೆಲ್ಲ ಹೊರಬಿದ್ದರು. ಗಿರಣಿಯಲ್ಲಿ ಯಮುನೆ, ಲಕ್ಷ್ಮಿ ಇವರು ಮಾತ್ರ ಉಳಿದರು. ಯಾವಾಗ ಗಿರಣಿ ಬಿಡುವುದೋ ಯಾವಾಗ ಮ್ಯಾನೇಜರರಿಗೆ ಭೇಟಿಯಾಗುವೆನೋ

ಎಂದು ಹಾದಿ ಕಾಯುತ್ತಲಿದ್ದ ಯಮುನೆಯು ಗಿರಣಿ ಬಿಟ್ಟೊಡನೆ ಕೂಡಲೆ ಎಲ್ಲರೂ ಹೋಗುವುದನ್ನು ನೋಡಿ ಲಕ್ಷ್ಮಿಯು ಒಳಗೆಹೋದಳು. ಉಭಯತರೂ ಕೂಡಿ ಮ್ಯಾನೇಜರರ ಕೋಣೆಯ ಬಳಿಗೆ ಬಂದರು. ಲಕ್ಷ್ಮಿಯು ಕಿಟಕಿಯಿಂದ ಕೋಣೆಯೊಳಗೆ ಇಣಿಕಿನೋಡಿ ಕಿರುದನಿಯಿಂದ "ಯಮೂ! ಮ್ಯಾನೇಜರರು ಇದೀಗ ಸಮಾಧಾನ ಬಗೆಯಲ್ಲಿರುವರು; ನೀನು ಒಳಗೆ ಹೋಗು; ನಾನು ಇಲ್ಲಿಯೆ ಹೊರಬದಿಯಲ್ಲಿರುವೆ" ಎಂದಳು. ಎಂದೂ ಪರಪುರುಷರ ಬಳಿಯಲ್ಲಿ ಏಕಾಂತದಲ್ಲಿ ಹೋಗಲು ಅರಿಯದ ಯಮುನೆಗೆ ಹೇಗೆಹೇಗೋ ಎನಿಸತೊಡಗಿತು. ಆದರೆ ಮಾಡುವದೇನು? ಹೊಟ್ಟೆ, ಹೊಟ್ಟೆಗಾಗಿ ಏನು ಬೇಕಾದರೂ ಮಾಡುವದು ಲೋಕದ ನೀತಿಯದೆ ಯಲ್ಲವೆ? ಕಡೆಗೆ ಅವಳು ಸಿದ್ಧನಾಯಕನ ಇಷ್ಟು ದಿನಗಳ ಸ್ವಭಾವವನ್ನು ನಂಬಿ ಒಮ್ಮೆ ಕೋಣೆಯನ್ನು ಸೇರಿದಳು.

ಆಗ ನಾಯಕರು ಸಿಗಾರೇಟನ್ನು ಸೇದುತ್ತ ಕುಳಿತುಕೊಂಡಿದ್ದರು. ಯಮುನೆಯು ಒಳಸೇರಿದುದನ್ನು ಕಂಡು ಅವರು "ಯಾರು ಯಮೂ, ನೀನೆ? ಅದೇಕೆ ಈಗ ಬಂದೆ?" ಎಂದು ಕೇಳಿದರು.

ನಾಯಕರ ನುಡಿ ಕೇಳಿ ಯಮುನೆಗೆ ತುಸು ಧೈರ್ಯ ಬಂದಂತಾಗಿ ಅವಳು "ರಾಯರೆ! ತಮ್ಮ ಬಳಿಗೆ ತುಸು ಕೆಲಸವಿದೆ; ಅದಕ್ಕಾಗಿ ಬಂದೆ."

"ಅದೇನು?"

ಯಮುನೆಯು ತಾನು ಹೇಳತಕ್ಕವ್ದನ್ನೆಲ್ಲ ಹೇಳಿ ತನ್ನ ಗಂಡನಿಗೆ ಮತ್ತೆ ಕೆಲಸದ ಮೇಲೆ ತೆಗೆದುಕೊಳ್ಳಬೇಕೆಂದು ಬಿನ್ನವಿಸಿಕೊಂಡಳು. ನಾಯಕರು ಅವಳು ಹೇಳುವುದನ್ನೆಲ್ಲ ನಿರ್ವಿಕಾರ ಚಿತ್ತದಿಂದ ಕೇಳಿಕೊಂಡು "ಯಮೂ, ನೀನು ಹೇಳುವುದೆಲ್ಲವೂ ನಿಜ; ಆದರೆ ಇನ್ನು ನನ್ನ ಕೈಯಲ್ಲೇನಿದೆ? ಆಗಲೆ ನೀನು ಬಂದಿದ್ದರೆ ಒಳಿತಾಗುತ್ತಿತ್ತು" ಎಂದರು. ಯಮುನೆಯ ಮನವು ಮಿಡುಕಿತು. ಆದರೂ ಅವಳು "ರಾಯರೇ, ಹಾಗೆನ್ನಬೇಡಿರಿ. ಬಡವರ ಬಾಳು! ಒಂದತ್ತಿಗೆ ಬಂದಿದೆ! ಮೊದಲಾದರೂ ನೀವೇ ನಮ್ಮ ಮೇಲೆ ದಯಮಾಡಿದಿರಿ; ಈಗ ನೀವೇ ಹೀಗಂದರೆ ನಮ್ಮನ್ನು ಕೇಳುವರಾರು?" ಎಂದು ಕಣ್ಣೀರು ತಂದಳು.

"ಯಮೂ, ನೀನು ಇಷ್ಟು ಹೇಳಿಕೊಳ್ಳುವಿಯೆಂದ ಮೇಲೆ ನಾನೂ ಯತ್ನಮಾಡಿ ನೋಡುವೆನು. ಗಿರಣಿಯ ಒಡೆಯರಿಗೆ ಭೆಟ್ಟಿಯಾಗಿ ನಿನ್ನ ಗಂಡನಿಗೆ ಮತ್ತೆ ಸೇರಿಸಿಕೊಳ್ಳುವಂತೆ ಮಾಡುವೆನು; ಆದರೆ . . . ."

"ಆದರೆ ಎಂದು ತಡೆದಿರೇಕೆ ರಾಯರೆ?" ಎಂದು ಯಮುನೆಯು ಸಂಶಯಿತಳಾಗಿ ಕೇಳಿದಳು.

"ಯಮೂ, ನಿನ್ನ ಕೆಲಸವನ್ನು ನಾನು ಮಾಡಿಕೊಟ್ಟರೆ ನನ್ನದೊಂದು ಕೆಲಸವನ್ನು ನೀನು ಮಾಡಿಕೊಡುವಿಯಾ?"

"ರಾಯರೇ, ನನ್ನಂತಹ ಅಬಲೆಯು ಕಡೆಗೆ ತಮ್ಮ ಕೆಲಸವೇನು?"

"ಯಮೂ, ನಾನು ಸ್ಪಷ್ಟವಾಗಿ ಹೇಳುವೆನು ಕೇಳು: ನಿಮ್ಮನ್ನು ಮೊದಲು ಇಲ್ಲಿ ಕೆಲಸಕ್ಕೆ ಸೇರಿಸಿಕೊಳ್ಳುವಾಗಲೆ ನಾನು ಕೇವಲ ನಿನ್ನ ರೂಪವನ್ನು ಕಂಡು ಮೋಹಿಸಿಯೆ ಇಟ್ಟುಕೊಂಡೆನು. ಆದುದರಿಂದ ನೀನು ಈಗ ನನ್ನವಳಾದರೆ ನಿನ್ನ ಕೆಲಸವನ್ನು ನಾನು ಮಾಡಿಕೊಡುವೆನು. ಇದಕ್ಕೆ ನಿನ್ನ ಒಪ್ಪಿಗೆ ಇದ್ದರೆ ಹೇಳು."

ಯಮುನೆಯು ಗಾಬರಿಯಾದಳು! ಮ್ಯಾನೇಜರನು ಒಳ್ಳೇ ಮನುಷ್ಯನೆಂದು ತಾನು ನಂಬಿದುದು ತಪ್ಪಾಯಿತು. ಅವನು ನೀಚಬುದ್ಧಿ ವ್ಯಕ್ತಿಯೆಂದೂ ಈಗ ಅವಳಿಗೆ ತಿಳಿದುಬಂದಿತು. ಆದರೂ ಅವಳು ತುಸು ಧೈರ್ಯದಿಂದ—"ರಾಯರೇ, ತಾವು ಇದೇನನ್ನು ಹೇಳುವಿರಿ? ಬಡವರ ತೊಂದರೆಗಳನ್ನು ಕಂಡು ಕಷ್ಟ ಸಮಯದಲ್ಲಿ ಅವರಿಗೆ ಈ ಪರಿ ಅಲ್ಲದ ಕೆಲಸ ಮಾಡಹೇಳುವದು ತಮ್ಮಂತಹರಿಗೆ ಒಳಿತಲ್ಲ; ರಾಯರೇ ಹೀಗೆ ಮಾಡಬೇಡಿರಿ, ಬಡವರ ಕುತ್ತಿಗೆ ಕೊಯ್ಯಬೇಡಿರಿ!"

"ಯಮೂ, ಇನ್ನು ಅದೇನೂ ನಡೆಯಲಾರದು. ನಿನ್ನ ಗಂಡನಿಗೆ ಕೆಲಸ ಬೇಕಾದರೆ ನನ್ನ ಮಾತಿಗೆ ಒಪ್ಪಿ ನನ್ನವಳಾಗು. ನಿನ್ನ ಸಂಸಾರದಲ್ಲಿ ಏನೂ ತೊಂದರೆಯಾಗದಂತೆ ನಾನು ನೋಡಿಕೊಳ್ಳುವೆನು. ನೋಡು; ಬಂದ ಸಂಧಿಯನ್ನು ಕಳೆದುಕೊಳ್ಳಬೇಡ!

ಯಮುನೆಯು ವಿಚಾರಮಗ್ನಳಾದಳು. ಬಡತನದಲ್ಲಿ ನಾನಾಗಿ ಸಂಕಟಪಡುತ್ತ ಸಾಯುವುದು ಒಳಿತೋ, ಅಥವಾ ಅದಕ್ಕಂಜಿ ತನ್ನ ಗರತಿತನವನ್ನು ಬಿಡುವದು ಒಳಿತೋ? ಒಂದು ವೇಳೆ ತಾನು ನಾಯಕನ ಮಾತಿಗೆ ಒಪ್ಪಿಕೊಳ್ಳದಿದ್ದರೆ ಅವನು ಇನ್ನು ನನ್ನನ್ನೂ ಕೆಲಸದಿಂದ ಬಿಡುಗಡೆಮಾಡುವನು. ಇದಕ್ಕೇನು ಮಾಡಬೇಕು? ಎಂದು ಅವಳು ಯೋಚಿಸಿದಳು. ದೈವೀ ಆಸುರೀ ವಿಚಾರಗಳು ಅವಳಲ್ಲಿ ತಾಕಲಾಡತೊಡಗಿದುವು. ಕಡೆಗೆ ಅವಳ ದೈವೀ ವಿಚಾರಬಲವು ಅಧಿಕವಾಯಿತು. ಅವಳು "ರಾಯರೇ, ನನಗೆ ನಿಮ್ಮ ಕೆಲಸ ಬೇಡ! ನಾವು ಹೇಗಾದರೂ ಮಾಡಿ ನಮ್ಮ ಹೊಟ್ಟೆ ತುಂಬಿಕೊಳ್ಳುವೆವು. ನಿಮ್ಮ ಮಾತಿಗೆ ನನ್ನ ಒಪ್ಪಿಗೆ ಇಲ್ಲ" ಎಂದು ಹೇಳಿ ಅಲ್ಲಿಂದ ತಟ್ಟನೆ ಹೊರಳಿದಳು.

ಮ್ಯಾನೇಜರನು ಅವಳ ನುಡಿಗಳನ್ನು ಕೇಳಿ ತುಸು ವಿಚಾರಕ್ಕೊಳಗಾದನು. ಅವನ ಮುಖವು ಉಗ್ರವಾಯಿತು. ಕೂಡಲೆ ಅವನು ತನ್ನ ಸ್ಥಳದಿಂದ ಎದ್ದು ಅವಳನ್ನು ತಡೆದು ಉಚ್ಚ ಸ್ವರದಿಂದ "ಏ ಯಮೂ, ಎಲ್ಲಿಗೆ ಹೊರಟೆ? ತಡೆ, ಬಲೆಗೆ ಬಿದ್ದ ಮಿಕವನ್ನು ಹಾಗೆಯೇ ಬಿಡುವವನು ನಾನಲ್ಲ! ನಿನ್ನಂತೆಯೆ ಗರತಿತನದ ಸೋಗು ಹಾಕಿಕೊಂಡ ಅನೇಕರು ನನ್ನ ಬಲೆಯಲ್ಲಿ ಬಿದ್ದಿದ್ದಾರೆ! ಹೊರಳು!" ಎಂದು ಅವಳ ಭುಜವನ್ನು ಬಲವಾಗಿ ಹಿಡಿದು ಒಳಗೆಳೆದನು. ನಾಯಕನ ಈ ರೀತಿಯನ್ನು ಕಂಡು ಯಮುನೆಯು ಅಂಜಿದಳು; ನಡುಗಿದಳು. ಅವಳಿಗೆ ಸಿಟ್ಟು ಬಂದಿತು. ಅವಳು—"ಎಲಾ ನೀಚಾ, ಪರಸ್ತ್ರೀಯರನ್ನು ಈ ಬಗೆಯಾಗಿ ಅಪಮಾನಗೊಳಿಸುವ ನೀನು ಹಾಳಾಗಿ ಹೋಗು! ನರಾಧಮಾ, ಜನಕ್ಕಿಲ್ಲದಿದ್ದರೂ ಮನಕ್ಕಾದರೂ ಹೆದರು! ಬಿಡು ನನ್ನನ್ನು. ಇಲ್ಲದಿದ್ದರೆ ನಾನು" ಅನ್ನುವಷ್ಟರಲ್ಲಿಯೇ ಆ ನೀಚ ಸಿದ್ಧನಾಯಕನು ಅವಳನ್ನು ಬಲವಾಗಿ ಸೆಳೆದು ಅಪ್ಪಿಕೊಂಡನು; ಅವಳು ಚಿಟ್ಟನೆ ಚೀರಿದಳು. ಆದರೆ ಆಗ ಗಿರಣಿಯಲ್ಲಿ ಯಾರೂ ಇರಲಿಲ್ಲ. ಕಡೆಗೆ ಯಮುನೆಯು ಲಕ್ಷ್ಮಿಯನ್ನೂ ಕೂಗಿದಳು. ಲಕ್ಷ್ಮಿಯು ಅವಳ ಧ್ವನಿಯನ್ನು ಕೇಳಿ [illegible] ಒಳಗೆ ಬಂದಳು. ಅವಳು

ಒಳಗೆ ಬಂದುದನ್ನು ಕಂಡು ಯಮುನೆಗೆ ತುಸು ಧೈರ್ಯ ಬಂದು ನಾಯಕನ ಕೈಯಿಂದ ತಪ್ಪಿಸಿಕೊಳ್ಳುವುದಕ್ಕೆ ಮತ್ತಿಷ್ಟು ಹವಣಿಸತೊಡಗಿದಳು.

ಲಕ್ಷ್ಮಿಯು ಒಳಗೆ ಬಂದು ನಿಜಸ್ಥಿತಿಯೆಲ್ಲವನ್ನು ತಿಳಿದುಕೊಂಡಳು ಲಕ್ಷ್ಮಿಯು ತನಗೆ ಸಹಾಯಮಾಡಿ ತನ್ನನ್ನು ಈ ದುಷ್ಟ ನಾಯಕನ ಕೈಯಿಂದ ಬಿಡಿಸಿಕೊಳ್ಳುವಳೆಂದು ಯಮುನೆಯು ನಂಬಿದ್ದಳು. ಆದರೆ ಲಕ್ಷ್ಮಿಯು ಹಾಗೇನು ಮಾಡದೆ ಯಮುನೆಯನ್ನು ಬಿಡಿಸಿಕೊಳ್ಳುವವಳಂತೆ ನಟಿಸಿ ಅವಳನ್ನೆ ಗಟ್ಟಿಯಾಗಿ ಹಿಡಿದಳು. ನಾಯಕನೂ ಲಕ್ಷ್ಮಿಯೂ ಕೂಡಿ ಯಮುನೆಯ ಬಾಯಲ್ಲಿ ಅರಿವೆ ಉಂಡಿಯನ್ನು ಹಾಕಿದರು ಯಮುನೆಗೆ ಈಗ ನಿಜಸ್ಥಿತಿಯೆಲ್ಲವೂ ಹೊಳೆಯಿತು. ಲಕ್ಷ್ಮಿಯೂ ನಾಯಕನೂ ಒಂದೇ ಬಳಗದವರೆಂದು ಅವಳಿಗೆ ಹೊಳೆಯಿತು. ಆದರೆ ಹೊತ್ತು ಮೀರಿದ ಮೇಲೆ ಅದರ ಉಪಯೋಗವೇನು?

ಆಯಿತು! ಯಮುನೆಯ ಗರತಿತನವು ಅಂದು ಮಣ್ಣುಗೂಡಿತೆಂದು ವಾಚಕರಿಗೆ ಬೇರೆ ಹೇಳಬೇಕಾಗಿಲ್ಲ! – [ಅರುಣೋದಯ.]

ಆಸ್ಸಾಮಿನಲ್ಲಿ ಸಂಚಾರಮಾಡುತ್ತ ಗಾಂಧಿಜಿಯವರು ಮೊದಲಿನ ನಾಲ್ಕು ದಿನಗಳಲ್ಲಿ ೩೮೨ ಮೈಲುಗಳಷ್ಟು ಪ್ರಯಾಣಮಾಡಿರುತ್ತಾರೆ.

ಆಸ್ಸಾಮಿನಲ್ಲಿ ಕೂಲಿಗಾರರ ಕೇಂದ್ರಗಳು ಬಹಳ ಅಶುಚಿಯಾಗಿವೆಯೆಂದು ಗಾಂಧಿಜಿಯವರ ಹೇಳಿಕೆ. ಅಲ್ಲಿರುವ ಕೂಲಿಗಳಲ್ಲಿ ಹೆಚ್ಚಿನವರು ದಕ್ಷಿಣದವರು.

ಲೈಸನ್ಸ್ ಇಲ್ಲದೆ ಅಫೀಮು ಸೇವಿಸಿದ ಮೂವರು ಚೀನಿಯವರನ್ನು ಕಲ್ಕತ್ತದಲ್ಲಿ ರೂ. ೨೫ರ ಜುಲುಮಾನೆಗೆ ಒಳಪಡಿಸಿರುವರು.

ಡಾಕ್ಕಾ ನಗರದ ಕುದುರೆ ಜೂಜಿನ ಸ್ಥಳದಲ್ಲಾರೂ ವಿಹರಿಸಬಾರದೆಂದು ಸರಕಾರಿ ಆಜ್ಞೆಯಾಗಿದೆ. ಕಳೆದವಾರ ಈ ಆಜ್ಞೆಯನ್ನುಲ್ಲಂಘಿಸಿದ ೨೦ ಮಂದಿಗಳನ್ನು ದಸ್ತಗಿರಿ ಮಾಡಿ, ಎಚ್ಚರ ಹೇಳಿ, ಬಿಟ್ಟುಬಿಟ್ಟರು.

ನಾಝಿಗಳ ಆಳಿಕೆಯ ಜರ್ಮನಿಯಲ್ಲಿ ವೃತ್ತಪತ್ರಿಕೆಗಳ ಚಂದಾದಾರರ ಸಂಖ್ಯೆ ಕುಗ್ಗುತ್ತಿದೆಯಾಗಿಯೂ, ೧೭೦೯ರಲ್ಲಿ ಹೊರಟ ಪತ್ರಿಕೆಯೊಂದು ಈಗ ನಿಂತುಹೋಯಿತೆಂದೂ ತಿಳಿದುಬರುತ್ತದೆ.

ಅಮೇರಿಕದ ಕಾದಂಬರೀಕಾರರಾದ ಲಿಪ್ಟನ್ ಸಿನ್ಕ್ಲೇರರು ಕೆಲಿಫೋರ್ನಿಯದ ಗವರ್ನರರ ಸ್ಥಾನಕ್ಕೆ ಉಮೇದ್ವಾರರಾಗಿರುವರು.

ಕೈರೋ ನಗರದ ಪ್ರಖ್ಯಾತ ಎಲ್ ಅಝರ್ ಮಜೀದಿಯ ಸಾವಿರದ ವರ್ಧಂತ್ಯುತ್ಸವ ಸಮಾರಂಭಕ್ಕಾಗಿ ಸಿದ್ಧತೆಗಳಾಗುತ್ತಿವೆ.

ಹಿಂದೀಯರು ಆರ್ಯರಲ್ಲವೆಂದು ಜರ್ಮನಿಯ ಡಾ। ಆಲ್ಫ್ರೆಡ್ ರೋಸನ್ ಬರ್ಗರವರ ಕೂಗು!

ಹಿಂದೀ ಯುವಕರಿಬ್ಬರು, ಉದ್ಯೋಗವನ್ನರಸುತ್ತ ಸೈಕಲಿನಲ್ಲಿ ಈ ತನಕ, ಒಟ್ಟು ೧೨ ತಿಂಗಳುಗಳಲ್ಲಿ ೫೨,೧೦೮ ಮೈಲುಗಳನ್ನು ಸಂಚಾರಮಾಡಿದುದಾಯಿತು.

ಎರಡಂಗುಲದ ಚಿಕ್ಕ ಬಾಲವಿರುವ ಒಂದು ಮಗು ಲಂಡನಿನ ಆಸ್ಪತ್ರೆಯಲ್ಲಿ ಜನಿಸಿದೆ.

ತನಗೆ ೬೦ ಸಾವಿರ ಪವನಿನ ಆಸ್ತಿ ದೊರೆಯಿತೆಂಬ ವದಂತಿ ಕೇಳಿ, ಜಿನೇವದ ಓರ್ವ ಹೆಂಗಸು ಸಂತೋಷವನ್ನು ತಡೆಯಲಾರದೆ ಹುಚ್ಚಿಯಾಗಿ, ನದಿಗೆ ಹಾರಿ ಪ್ರಾಣಬಿಟ್ಟಳು.

ಮೊಹರಮ್ ಹಬ್ಬದ ಸಂಬಂಧವಾಗಿ ಉತ್ತರಹಿಂದೂಸ್ಥಾನದ ಅನೇಕ ಕಡೆಗಳಲ್ಲಿ ಗಲಭೆಗಳಾಗಿವೆ.

ನೊಟಂಗ್ಹಾಮಿನ ಒಂದು ಕಾರ್ಖಾನೆಯು ಮಜೂರರಿಗೆ ೫ ದಿನಗಳ ಕೆಲಸದ ವಾರವನ್ನು ಗೊತ್ತುಪಡಿಸಿ, ಪರೀಕ್ಷಾರ್ಥ ಇದನ್ನು ೫ ತಿಂಗಳ ತನಕ ನಡೆಸುವ ನಿರ್ಧಾರ ಮಾಡಿದೆ. ಸಂಬಳ ಕಡಿತಾಯವಿಲ್ಲ.

ಬಡತನದ ಇತಿವೃತ್ತ.

ಲೇಖಕರು:— ಶ್ರೀ ಕಾಪು ಮಂಜುನಾಥ ಶೆಣೈ

ಬಡತನವೆಂದರೆ ಸರಿ; ಎಲ್ಲರೂ ನಿಂದಿಸುವರು. ಅಂತವರಿಗೆ ಬಡತನದ ಸತ್ಯಸೊಗಸುಗಳ ಅರಿವಿಲ್ಲ. ಸಿರಿಸಂಪತ್ತುಗಳ ಸುಪತ್ತಿಗೆಯಲ್ಲಿ ಶಯನಮಾಡುವುದೇ ಸುಖವೆಂದು ಕಾಣುವರವರು. ಸಿರಿಯು ಸುತರಾಂ ಸ್ಥಿರವಲ್ಲ. ಅದು ಮತ್ತತೆಯ ಉತ್ಪಾದಕ ಶಕ್ತಿಯುಳ್ಳುದು. ಧನಬಲ, ರಕ್ತಬಲಗಳು ಏಕೀಕರಿಸುವುದೇ ಮದದ ಮೂಲ. ಈ ಮದಾಂಧಕಾರವನ್ನು ಎಷ್ಟೇ ತೀಕ್ಷ್ಣ ಸೂರ್ಯಪ್ರಕಾಶವಾದರೂ ಶಮನಿಸಲಾರದು. ಅಷ್ಟು ಭೀಕರ ಅಂಧತೆಯದು! ಈ ಅಂಧತ್ವನಿವಾರಕವಾದ ಯಾವ ಅಂಜನವೂ ಈ ತನಕ ಸಂಜನಿಸಿರುವುದಿಲ್ಲ. ಇಂತಹ ಕಠಿಣ ಕೋಟಲೆಯು ಕೋಟಿಯಿದ್ದರೂ ಎಂತಹ ಮಹತ್ಕಾರ್ಯವನ್ನಾದರೂ ಸುಲಭಸಾಧ್ಯವೆಂದು ನಿರ್ಲಕ್ಷಿಸಿ, ಕೊನೆಗೆ ಅಪಾರ ಸಂಕಷ್ಟಕ್ಕೆ ಗುರಿಯಾಗುವರು. ಬಡತನದಲ್ಲಿ ಅಂಧತೆಯಿಲ್ಲ; ದೂರದೃಷ್ಟಿಯಿದೆ. 'ಇಳಿತಭರತಗಳ ಅಶಾಂತಿಯ ಕ್ರೌರ್ಯವಿಲ್ಲ; ಶಾಂತಿಯ ಸೌಮ್ಯತೆಯಿದೆ. ಅತೃಪ್ತಿಯ ಜಡತ್ವವಿಲ್ಲ; ಸಂತುಷ್ಟತೆಯ ಸಚೇತನವಿದೆ. ಅದುಕಾರಣವೇ ದೂರ್ವಾಸ ಮುನಿಯ ಮನಸಿಗೆ ಗುರಿಯಾಗಿ, ಇಂದ್ರನ ಐಶ್ವರ್ಯವು ಮೊದಲು ಒಮ್ಮೆಗೆ ರಾಕ್ಷಸರ ಪಾಲಾಯಿತೆಂದು ಐತಿಹ್ಯವಿದೆ. ಬಡವರಲ್ಲಿ ಐಶ್ವರ್ಯವಿಲ್ಲದಿದ್ದರೂ, ಅವರ ಒಡಲುರಿಯು ತಣಿಸಲಾರದ ಕಾಡ್ಗಿಚ್ಚಿನಂತೆ ಉಜ್ವಲ! ಅದು ಕ್ಷಣಾರ್ಧದಲ್ಲಿ ಎಂತಹ ವಿಸ್ತಾರವಾದ ಸಂಪತ್ತಿನ ರಾಶಿಯನ್ನಾದರೂ ದಹಿಸಿಬಿಡಬಲ್ಲುದು. ಲಕ್ಷ್ಮಿಯು ಸ್ವತಯೇವ ಚಂಚಲೆಯಲ್ಲವಾದರೂ ಆಶ್ರಯಸ್ಥಾನದ ವರ್ತನದೋಷದಿಂದ ಶರತ್ಕಾಲದ ಮೇಘದಂತೆ ಅಸ್ಥಿರಳು. ಅದುಕಾರಣವೇ ಐಶ್ವರ್ಯವು ಮಿಂಚಿನಂತೆ ಕ್ಷಣಹೊತ್ತು ಕಾಣಿಸಿಕೊಂಡು ಮರುಕ್ಷಣದಲ್ಲಿ ಅಂತರ್ಧಾನವಾಗುವುದು. ಜಗತ್ತಿನಲ್ಲಿ ಯಾರಾದರೂ ಸಂಪತ್ತನ್ನು ಬಹುಕಾಲದ ವರೆಗೆ ಉಳಿಸಿಕೊಂಡಿರುವರೇ? ಪರಂತು ಅದರಲ್ಲೊಂದು ವಿಶಿಷ್ಠ ಶಕ್ತಿಯಿದೆ. ಶಕ್ತಿಹೀನನಾದವನನ್ನು ಶಕ್ತಿಯುಕ್ತನನ್ನಾಗಿಯೂ, ಕುಲಹೀನನಾದವನನ್ನು ಕುಲೀನನನ್ನಾಗಿಯೂ,ರೂಪರೇಖೆಗಳಿಲ್ಲದವನನ್ನುಮನ್ಮಥನಂತೆಯೂ ಮಾಡಿತೋರಿಸುವುದು. ಗುಣಸಂಪನ್ನರನ್ನೂ, ನಿರ್ದೋಷಿಗಳನ್ನೂ, ತ್ಯಾಗಿಗಳನ್ನೂ ತ್ಯಜಿಸುವುದು. ಮುದ್ರಾಮಂಜೂಷದಲ್ಲಿ ಉಲ್ಲೇಖಿಸಿದಂತೆ ಲಕ್ಷ್ಮಿಯು 'ಶೂರನನ್ನು ಸರ್ಪದಂತೆಯೂ, ಮನಸ್ವಿಯನ್ನು ಮುಳ್ಳಿನಂತೆಯೂ, ವಿಸೀತನನ್ನು ಹುಚ್ಚನಂತೆಯೂ' ಕಾಣುವಳು. ಜಲರಾಶಿಯಲ್ಲಿ ಹುಟ್ಟಿದವಳಾದರೂ ಮತ್ತು ತೃಷ್ಣೆಯನ್ನುಂಟುಮಾಡುವಳು. ಅಮೃತಸಹೋದರಿಯಾದರೂ ಕಾಠಿಣ್ಯದ ಪ್ರತಿಮೂರ್ತಿಯು. ಆಕೆ ಆಶ್ರಯಿಸಿದವನನ್ನು ಹೇಗೆ ಮಿಗಿಲುಮಿಗಿಲಾಗಿ ಪ್ರಕಾಶಪಡಿಸುತ್ತಿರುವಳೋ, ಹೆಚ್ಚಾಗಿ ಉರಿಯುವ ದೀಪಕ್ಕೆ ಹೊಗೆ ಮುಚ್ಚುವಂತೆ, ಅವನಿಂದ ಪಾಪಕಾರ್ಯವನ್ನು ಮಾಡಿಸುವಳು.

ಐಶ್ವರ್ಯವಂತರಿಗೆ ಸತ್ಯ, ಅಸತ್ಯ, ನ್ಯಾಯ, ಅನ್ಯಾಯ, ಪಾಪಪುಣ್ಯಗಳ ತುಲನಾತ್ಮಕ ವಿಚಾರವಿಲ್ಲ. ಧರ್ಮ—ಅಧರ್ಮಗಳ ಕರ್ಮಾಚರಣೆಯಿರುವುದಿಲ್ಲ. ಸದಾಕಾಲವೂ ಭೋಗಪ್ರಿಯರಾಗಿ, ಐಶ್ವರ್ಯದಿಂದ ಜಡಭರಿತರಾಗಿ ವಿಲಾಸವೆಂದು ಸುರಾಪಾನಮಾಡುವರು. ಪರಸ್ತ್ರೀ ಸಂಗಮಾಡಿ, ತಾವು ರಸಿಕರೇಯೆನ್ನುವರು. ತಾವು ಏನುಮಾಡಿದರೂ ನಡೆಯುವುದೆಂದು ಕ್ರೂರ ಹಿಂಸೆಯನ್ನು ಮಾಡಲಿಕ್ಕೂ ಅವರು ಹೇಸಲಾರರು. ನಿಜವಾದ ಗೆಳೆಯರು ಯಾರೆಂದು ವಿವೇಚಿಸದೆ ಮುಖಕ್ಕೆ ತಕ್ಕ ಮಾತಾಡುವವರನ್ನು ಆಪ್ತರೆಂದೆನಿಸಿ, ಕೌರವನು ಮತ್ತತೆಯಿಂದ ಶಕುನಿಯ ಮಾತಿಗೆ ಮರುಳಾಗಿ ಕೆಟ್ಟಂತೆ ಕೆಡುವರು. ಲೋಕದ ಅಪವಾದವನ್ನು ಗಣಿಸಲಾರರವರು.

ಇಂತಹ ಅಘೋರ ಆಂದೋಲನಗಳ ಹೋರಾಟವೇನೂ ಬಡತನದಲ್ಲಿಲ್ಲ. ಅದು ಸದಾ ಶಾಂತಮನೋವೃತ್ತಿಯುಳ್ಳುದು. ಬಡತನದ ಅಡಿಗಲ್ಲಿನ ಮೇಲೆಯೇ ಸಿರಿತನದ ಅರಮನೆಯು ಕಟ್ಟಲ್ಪಟ್ಟಿದೆ. ಧನಿಕರು ಈ ವಿಚಾರವನ್ನು ಅರಿಯರು. ಬಡವರ ನೋವು ಧನಿಕರಿಗೆ ಕೇಳಲಾರದು. ಪರಂತು ಬಡತನವು ಏಕತ್ರಿತವಾಗಿ ಒಂದೊಮ್ಮೆಗೆ ಕಾಲಿನ [illegible] ಆದರೆ, ಸಿರಿತನದ ಅರಮನೆಯು ಕುಸಿದು

ನೆಲಸಮವಾಗಬಹುದು. ಭಯಂಕರವಾದ ಭೂಕಂಪಕ್ಕಿಂತಲೂ ಈ ಕಂಪನದ ತೀಕ್ಷ್ಣತೆಯೇ ಬಹಳ. ಸಿಟ್ಟಿಲ್ಲದವನಿಗೆ ಸಿಟ್ಟು ಬಂದರೆ ಹೇಗಾಗಬಹುದು?

ಧನಿಕರೂ–ಧರಿದ್ರರೂ ಹರಿದಿನಗಳಲ್ಲಿ ಉಪವಾಸ ಮಾಡುವರು. ಆದರೇನು? ಧನಿಕರು ಭೋಜನದ ಬದಲಾಗಿ ಇತರ ವಿಧಗಳಿಂದ ಹಸಿವು ತಣಿಸುವರು. ಬಡವರು ನಿರಾಹಾರಿಗಳಾಗಿಯೇ ಇರುವರು. ಈ ಚಿಕ್ಕ ವಿಷಯವನ್ನು ಸಮಾಲೋಚಿಸಿದರೆ ಉಪವಾಸದ ಪುಣ್ಯ ಯಾರಿಗೆ? ಬಡವರಿಗೆ. ಧನಿಕರು ತಾವು ಧನಬಲದಿಂದ ಸಹಸ್ರ ಭೋಜನ ಮಾಡಿಸಿ, ಪುಣ್ಯಸಂಪಾದಿಸಬಹುದೆಂದು ಎಣಿಸುವರು. ಅದು ಭಕ್ತಿಯುಕ್ತವಾದುದಲ್ಲ. ಅದು ನಿರರ್ಥಕ.

ಹಿಂದೊಮ್ಮೆ ಒಬ್ಬ ವಿದ್ವಾಂಸರು ಧನಿಕನೊಬ್ಬನಿಗೂ ಬಡವನೊಬ್ಬನಿಗೂ ಒಂದೇ ವಿಧವಾದ ಕಷ್ಟಬಂದಾಗ, ಧನಿಕನಿಂದ ಸಹಸ್ರಭೋಜನ ಮಾಡಿಸಿದನೆಂದೂ, ಬಡವನಿಂದ ಮನೆಯ ಮುಂಗಡೆ ಹರಿದುಹೋಗುವ ಇರುವೆಗಳ ಸಾಲಿಗೆ ಸಕ್ಕರೆ ಇಕ್ಕಿಸಿದನೆಂದೂ ಅದರಿಂದ ಇಬ್ಬರ ಕಷ್ಟಗಳೂ ತೊಲಗಿದವೆಂದೂ ಒಂದು ಹಳ್ಳಿಯ ಮಾತಿದೆ. ಇದರಲ್ಲಿ ಅಡಕವಾಗಿರುವ ಸಿರಿತನ–ಬಡತನಗಳ ತಾರತಮ್ಯಗಳನ್ನಾದರೂ ಯೋಚಿಸಬಾರದೇಕೆ?


ಇನ್ನೂ ಇಂತಹ ಅನೇಕ ಉದಾಹರಣೆಗಳಿವೆ:–ಸದ್ಗುರು ನಾನಕರೆಂಬವರಲ್ಲಿಗೆ ಇಬ್ಬರು ಮನುಷ್ಯರು ಪಾದಕಾಣಿಕೆಗಳನ್ನು ಕೊಂಡುಹೋದರು. ಧನಿಕನು ತನ್ನ ದ್ರವ್ಯಬಲದಿಂದ ನವನೂತನವಾದ ಪಾಕ ಪಕ್ವಗಳನ್ನೂ, ಬಡವನು ತನ್ನ ಶಕ್ತಿಮೀರಿದ ಒಂದು ರೊಟ್ಟಿಯನ್ನೂ ಕೊಟ್ಟರು. ಗುರು ನಾನಕರು ಮಾತ್ರ ಬಡವನ ರೊಟ್ಟಿಯನ್ನು ಭುಂಜಿಸಲಾರಂಭಿಸಿದರು. ಆಗ ಧನಿಕನು 'ನನ್ನದನ್ನು ಸ್ವೀಕರಿಸಲಿಲ್ಲವೇಕೆ?' ಎಂದು ಕೇಳಿದನು. ಗುರುಗಳು ಇಬ್ಬರ ತಿಂಡಿಯನ್ನೂ ಮುಷ್ಟಿಯಿಂದ ಬಲವಾಗಿ ಹಿಂಡಲು, ಧನಿಕನ ತಿಂಡಿಯಿಂದ ರಕ್ತವೂ, ಬಡವನ ರೊಟ್ಟಿಯಿಂದ ಹಾಲೂ ಸುರಿಯಿತೆಂದು ಒಂದು ಕತೆ ಇದೆ. ಇದರಿಂದ ಬಡವನ ಭಕ್ತಿಯು ಎಂತಹ ಅಲ್ಪವನ್ನಾದರೂ ಮಹಾ ಪರ್ವತ ಸಮಾನ ಮಾಡುವುದೆಂದು ನಿಷ್ಪನ್ನವಾಗುತ್ತದೆ. ಈ ಕತೆಗಳು ಬಡವರಿಗೂ ಧನಿಕರಿಗೂ ಆದರ್ಶಪ್ರಾಯವಾಗಿವೆ. ಪರಂತು ಈ ತಾತ್ವಿಕ ವಿಚಾರಗಳು ಧನಿಕರ ಅವಗಾಹನೆಗೆ ಬರುವುದೆಂದು? ಕಷ್ಟಬಂದಾಗ ಮಾತ್ರ. ಬಡವರಿಗೆ ಕ್ಷಣ ಕ್ಷಣಕ್ಕೂ ಇದರ ಅರಿವಿದೆ.

ಸಂಪತ್ತಿನ ಸಮಾಪ್ತಿಯೇ ವಿಪತ್ತಿನಲ್ಲಿ. ಎಷ್ಟೇ ಧನಿಕನಿರಲಿ; ಅವನು ಹಾವಿನ ಹೆಡೆಯ ಮೇಲೆ ಮಲಗಿದವನಂತೆ,–ಆಪತ್ತಿನ ಜ್ವಾಲಾಮುಖಿಯ ತುದಿಯಲ್ಲಿರುವನು. ಅದು ಆವ ಕಾಲದಲ್ಲೂ ಸ್ಫೋಟವಾಗಬಹುದು. ಅದುಕಾರಣ ಅದರ ಅರ್ಥದಿಂದ ಆವ ಪುರುಷಾರ್ಥವನ್ನೂ ಸಾರ್ಥಕವಾಗಿ ಸಂಪಾದಿಸಲಿಕ್ಕೆ ಸಾಧ್ಯವಿಲ್ಲ. ಅವರಿಗೆ ಯಾವುದರಲ್ಲಿಯೂ ವಿಶ್ವಾಸವಿಲ್ಲ. ಅರ್ಥದಲ್ಲಿ ಸ್ವಾರ್ಥವಿದೆ. ಸ್ವಾರ್ಥದಿಂದ ಅನರ್ಥಗಳುಂಟಾಗುತ್ತವೆ. ಆದರೆ ದೀನರು ಯಾವುದಕ್ಕಾಗಿ ಸ್ವಾರ್ಥಸಾಧನೆ ಮಾಡಬೇಕು?

ಬಡವರಿಗೆ ಒಡಲಾಶೆಯಿದ್ದರೂ, ಅವಿಶ್ವಾಸ ಅಶ್ರದ್ಧೆಗಳಿಲ್ಲ. ಆದುದರಿಂದಲೇ ದೇಶದ ಉದ್ಧಾರವಾಗಬೇಕಾದರೆ, ಬಡವರ ಉದ್ಧಾರವಾಗದೆ ನಿರ್ವಾಹವಿಲ್ಲವೆಂದು ತಿಳಿದು ಬಡವರ ಬಂಧು ಮಹಾತ್ಮಾ ಗಾಂಧೀಜಿಯವರು ಈ ಕರ್ತವ್ಯದಲ್ಲಿ ಕಂಕಣಬದ್ಧರಾಗಿರುವರು.

ಬಡವನ ಮನೆಯು ಎಲೆಮನೆಯಾದರೂ, ಶಾಂತಿಯು ಸ್ವಸ್ಥಚಿತ್ತದ ನೆಲೆಮನೆಯಾಗಿದೆ. ಅರ್ಥಾತ್, 'ಬಡತನ'ವೆಂಬುದು ಜಗಿಯಲಾಗದ ಬೆಣಚು ಕಲ್ಲಲ್ಲ; ಸವಿಯಾದ ಕಲ್ಲುಸಕ್ಕರೆಯೆಂದು ಜನಸಮುದಾಯಕ್ಕೆ ಮನಗಾಣಿಸಲಿಕ್ಕೆ ಟೊಂಕ ಕಟ್ಟಿದ **'ಬಡವರ ಬಂಧು'**ವಿಗೆ ಈ ದ್ವಿತೀಯ ವರ್ಷಾಂತ್ಯವಾಗಲಿರುವ ಕಾಲದಲ್ಲಿ ಅಭ್ಯುದಯವನ್ನು ಹಾರೈಸಿ, ಅಲ್ಲಿಗೇ ವಿರಮಿಸೋಣ!!!

** **



ಇನ್ನು ಒಂದು ಸಂಚಿಕೆಯು ಪ್ರಕಟವಾದರೆ, "ಬಡವರ ಬಂಧು"ವಿಗೆ ಎರಡು ವರ್ಷಗಳು ಮುಗಿಯುವುವು. ಜುಲೈಯಲ್ಲಿ ನಮ್ಮ ಪ್ರಥಮ ಸಂಚಿಕೆಯು ವಿಶೇಷ ಸಂಚಿಕೆಯಾಗಿ ಪ್ರಕಟವಾಗುವುದು.

ಮೂರನೇ ವರ್ಷದಲ್ಲಿ ಪುಸ್ತಕವು 36 ಪೌಂಡು (Antique) ಕಾಗದದಲ್ಲಿ ಅಚ್ಚಾಗುವುದು. 36 ಪುಟಗಳಷ್ಟನ್ನಾದರೂ ವಾಚಕರಿಗೆ ಕೊಡಬೇಕೆಂದು ಯೋಜಿಸಟ್ಟಿದೆ. ಅಲ್ಲದೆ ಸಚಿತ್ರವಾಗಿಯೂ ಮಾಡಬೇಕೆಂದು ಆಶಯವಿದೆ.

ಪ್ರಿಯ ಚಂದಾದಾರರು ನಿತ್ಯದಂತೆ ವಿಪುಲ ಸಹಾಯವನ್ನೀಯಬೇಕೆಂದು ಪ್ರಾರ್ಥನೆ. ತಮ್ಮ ಚಂದಾ ಹಣವನ್ನು ಕ್ಲಪ್ತ ಸಮಯದಲ್ಲಿ ರವಾನಿಸಿಯೂ, ಹೊಸ ಮಿತ್ರರನ್ನು ಕೂಡಿಸಿಯೂ ಕೊಡಬೇಕಾಗಿ ಬಿನ್ನಹ. ವಾಚಕರ ಸಹಕಾರವೇ ಪತ್ರಿಕೆಯ ಸರ್ವಸ್ವ.

ವಾಚಕರ ಹೆಸರು ವಿಳಾಸಗಳ ಪಟ್ಟಿಯನ್ನು ಮುದ್ರಿಸಲಿರುವುದರಿಂದ—ಮೂರನೇ ವರ್ಷಕ್ಕೆ ಪತ್ರಿಕೆಯು ಬೇಡವಾದವರು ನಮಗೆ ಆ ವಿಷಯವನ್ನು ಕೂಡಲೇ ತಿಳಿಸಬೇಕು.

ಹಾಗೆ ತಿಳಿಸದವರ ಹೆಸರುಗಳು ಮುದ್ರಿತವಾಗಿ ಅವರು ನಮ್ಮ ಮೂರನೇ ವರ್ಷದ ಚಂದಾದಾರರಾಗಿ ಭಾವಿಸಲ್ಪಡುವರು. ಆ ಮೇಲೆ ಪತ್ರಿಕೆಯು ತಿರಸ್ಕೃತವಾದರೆ ನಮಗೆ ಅನಾನುಕೂಲತೆಯನ್ನು ತಂದೊಡ್ಡಿದಂತಾಗುವುದು.

ಜೀವನದಲ್ಲಿ ಯಾವ ಸ್ಥಿತಿಗತಿಯವರೇ ಆಗಲಿ, ಅವರು ತಮ್ಮ ಅನುಭವಕ್ಕೆ ಬಂದಿರುವ ಜೀವನದ ಹೋರಾಟ--ಬಡತನ ಮೊದಲಾದ ವಿಚಾರವಾಗಿ ಕಥೆ, ಪದ್ಯ, ವಿಚಾರೋಪನ್ಯಾಸಗಳನ್ನು ಬರೆದು ನಮಗೆ ಕಳುಹಿಸಿದರೆ, ಆರಿಸಿ ಪ್ರಕಟಿಸುವೆವು. ಅಲ್ಲದೆ, ವಾಚಕರು ತಮ್ಮ ಊರುಗಳ ಪ್ರಸಿದ್ಧ ಬರಹಗಾರರ ಹೆಸರು ವಿಳಾಸಗಳನ್ನೂ ನಮಗೆ ಬರೆದು ತಿಳಿಸಬೇಕಾಗಿ ಕೋರಿಕೆ.

ಬಡವರ ಬಂಧುವು ಪ್ರತಿ 15ನೇ ತಾರೀಕಿಗೆ ಪ್ರಕಟವಾಗುವುದೆಂದು ನಾವು ತಿಳಿಸಿರುವ ಸಂಗತಿಯು ವಾಚಕರೆಲ್ಲರಿಗೆ ವಿದಿತವಿರಬಹುದೆಂದು ಊಹಿಸುವೆವು.

ಬಡವರ ಜೀವನವನ್ನು ಬಯಲಿಗೆಳೆಯುವ ಭಾವಚಿತ್ರ (Photo) ಗಳನ್ನು ನಮಗೆ ಕಳುಹಿಸಲೂ ಬಹುದು. ಅವುಗಳನ್ನು ಬ್ಲಾಕು ಮಾಡಿಸಿ ಪ್ರಕಟಿಸುವೆವು. ಪ್ರೋತ್ಸಾಹವೂ ಸಹಾನುಭೂತಿಯೂ ಇರಲಿ!

ಸಂಪಾದಕರು.

* * * *

ಮೈಸೂರು ನರ್ಸಣ್ಣನ ಹಿತೋಪದೇಶ.

ಬೈ ಮಿಸ್ಟರ್:—ಮೈಸೂರು ನರ್ಸಣ್ಣ.

ಶ್ರೀದೇವರ ದಯೆಯಿಂದ 'ಬಡವರ ಬಂಧು' ಸಂಪಾದಕರು ಮಿಸ್ಟರ್ ಮೈಸೂರು ನರ್ಸಣ್ಣನನ್ನು 23 ತಿಂಗಳುಗಳ ತನಕ ಸಾಕಿ ಸಲಹಿ ಪುಣ್ಯ ಸಂಪಾದನೆ ಮಾಡಿದರು. ಅವರಿಗೆ ನಮ್ಮ ನಿಮ್ಮ ಧನ್ಯವಾದಗಳು ಅಗತ್ಯವಾಗಿ ಸಲ್ಲಲೇಬೇಕು. ಇನ್ನು ಒಂದು ತಿಂಗಳ ಸಂಚಿಕೆಯನ್ನು ಅವರು ವಾಚಕರಿಗೆ ಕೊಟ್ಟರೆ ರೂ. 1—4—0 ಸೀರಾದಂತಾಗುವುದು. ಬರುವ ವರ್ಷದಿಂದ—ಅಂದರೆ, ಮೂರನೇ ವರ್ಷದಿಂದ 'ಬಡವರ ಬಂಧು' ದಪ್ಪ ಕಾಗದದಲ್ಲಿ ಅಚ್ಚಾಗಿ, ಸಚಿತ್ರವಾಗಿ ಹೊರಡುವುದೆಂದು ವಾಚಕರಿಗೆ ತಿಳಿಸಬೇಕೆಂದು ಸಂಪಾದಕರು ನನಗೆ ತಿಳಿಸಿರುವರು. 'ಬಡವರ ಬಂಧು'ವಿನ ಚಂದಾದಾರರ ಸಂಖ್ಯೆಯು ತುಂಬಾ ಹೆಚ್ಚಿರುತ್ತದೆಂದೂ, ಬಡವರ ಸೇವೆಯನ್ನು ಕೈಕೊಂಡಿರುವ ಸಂಪಾದಕರ ಧ್ಯೇಯವನ್ನು ಅಖಿಳ ಕರ್ನಾಟಕವೇ—ಏಕೆ, ಅಖಿಳ ಹಿಂದೂಸ್ಥಾನವೇ ಪ್ರಶಂಸಿರುತ್ತದೆಂದೂ ತಿಳಿಸಬೇಕೆಂದೂ ಸಂಪಾದಕರು ನನಗೆ ತಿಳಿಸಿರುವರು. ಆಗಲಪ್ಪಾ ಆಗಲಿ! ಆದರೆ ತಾವು—ಅಂದರೆ ವಾಚಕರು, ಈ ಪತ್ರಿಕೆಯನ್ನುಹಲವು ವಿಧದಿಂದಲೂ ಪ್ರೋತ್ಸಾಹಿಸಬೇಕು. ವಿ. ಪಿ. ಹಿಂದೆ ಮಾಡದೆ, ಮಣಿಯಾರ್ಡರು ಮಾಡಿ ಚಂದಾ ಹಣವನ್ನು ತುಂಬಿಸಬೇಕು. ಕೇಳಿದಾಗ ಹಣವನ್ನು ಕೂಡಲೇ ರವಾನಿಸಬೇಕು;-ಅಲ್ಲದೆ ಸಂಪಾದಕರು ಮೂರು ಮೂರು ನೋಟೀಸು ಕೊಟ್ಟರೂ ಅವುಗಳನ್ನು ಕುರ್ಚಿಯಡಿಯಲ್ಲಿ ಹಾಕಿ ಕುಳಿತು, ವಿ. ಪಿ. ಬಂದರೆ ತಿರಸ್ಕರಿಸಬಾರದು. **ಬಡವರ ಬಂಧುವಿನ ಒಂದು ವಿ. ಪಿ. ತಿರಸ್ಕರಿಸುವವರು 1000 ಪ್ರಾಣಗಳನ್ನು ನಾಶಮಾಡಿದವರಾಗುತ್ತಾರೆ.** ಆದುದರಿಂದ ತಮ್ಮ ತಮ್ಮ ಚಂದಾ ಹಣವನ್ನು ಮೇ ತಿಂಗಳೊಳಗೆ ರವಾನಿಸಿ ಎಲ್ಲರೂ ಪ್ರೋತ್ಸಾಹಿಸಿರಿ! ರೂಪಾಯಿ 1—4—0ರ ಆಶೆ ನೋಡಬೇಡಿ! ನಿಮ್ಮ ನಿಮ್ಮ ಊರಿನಲ್ಲಿ ಒಳ್ಳೆಯ ಕನ್ನಡ ಬರೆಯುವವರಿದ್ದರೆ, ಬಡತನದ ಕುರಿತು ಅವರು ಬರೆಯಬೇಕೆಂದು ಕೇಳಿಕೊಳ್ಳಿ; ನೀವೂ ಮನಸ್ಸು ಕೊಟ್ಟು ಬರೆಯಿರಿ. ಯಾರ ಲೇಖನಗಳು ತಿರಸ್ಕರಿಸಲ್ಪಡುವುವೋ ಆ ಲೇಖನಗಳ ಹೆಸರನ್ನು ಮಾತ್ರ ಸಂಚಿಕೆಯಲ್ಲಿ ಮುಂದಕ್ಕೆ ಪ್ರಕಟಿಸುವೆವೆಂದು ಸಂಪಾದಕರು ತಿಳಿಸಿದ್ದಾರೆ. ಹೀಗೆ ಮಾಡುವುದರಿಂದ ಲೇಖಕನು ಸಂಪಾದಕರಿಗೆ ಕೊಡುವ ಕರೆಸ್ಪೊಂಡೆನ್ಸಿನ ಉಪದ್ರವವು ತಪ್ಪುವುದಂತೆ!

ಇನ್ನೊಂದು ಮಾತು:—ನೀವೆಲ್ಲರೂ ಕೂಡಿಕೊಂಡು ನನ್ನನ್ನು ಕಳೆದ 23 ತಿಂಗಳುಗಳಿಂದಲೂ ಸಾಕಿ ಸಲಹಿ, ನಾನು ಹೇಳಿದ ನುಡಿಗಳನ್ನು ಕೇಳಿ ಓದಿ ಆನಂದಿತರಾಗಿರುವಿರಿ! ಮುಂದಿನ ಮೂರನೇ ವರ್ಷದಲ್ಲಿ ನಾನು 'ಬಡವರ ಬಂಧುವಿನಲ್ಲಿ' ಬರಬೇಕೋ ಬೇಡವೋ ಎಂಬ ವಿಷಯಕ್ಕಾಗಿ ದಯವಿಟ್ಟು ತಮ್ಮ ವೋಟುಗಳನ್ನು ನನಗೆ ಕೊಡಬೇಕು. ಈ ವೋಟುಗಳನ್ನು ಇದೇ ಜೂನ್ ತಾ. 10ರೊಳಗೆ ಕಳುಹಿಸಬೇಕು; ದಯವಿಟ್ಟು ಮರೆಯಬಾರದು. ದಾಕ್ಷಿಣ್ಯದ ಮೇಲೆ ನಿಮ್ಮ ವೋಟು ಕೊಡಬೇಡಿ. ಮನಃಪೂರ್ವಕವಾಗಿ ಕೊಡಿರಿ. ಈ ತಿಂಗಳ 'ಬಡವರ ಬಂಧು' ಬಹಳ ನಾಜೂಕಾಗಿದೆ ಎಂದು ನಿಮಗೇನೆ ತಿಳಿದೀತು! ನಿಮ್ಮ ಪ್ರೋತ್ಸಾಹ ಇದ್ದರೆ ಇದನ್ನು ಇನ್ನೂ ಅಂದಮಾಡಿಯೇ ಮಾಡುವೆವು. ಮುಖ್ಯ ಏನಂದರೆ—ನೀವು ದುಡ್ಡು, ದುಡ್ಡು ಕೊಡಬೇಕು! ದುಡ್ಡಿನ ಚೀಲ ಬಿಚ್ಚಬೇಕು. ಅಲ್ಲದೆ ತಿರಸ್ಕಾರದೃಷ್ಟಿಯಿಂದ ಈ ಮಾಸಿಕವನ್ನು ನೋಡಬಾರದು. ಅಷ್ಟೆ ನಮಗೆ ಬೇಕಾದುದು. ನಿಮಗೆ ಮಂಗಳವಾಗಲಿ!

ಇಂತಿ ನಿಮ್ಮ ಮಿತ್ರ

ಮೈ. ನ.

ನಗೆಯ ಸುಳಿಗೆ!

ಬರೆದುದು—ಕೈ. H. A. N. D.

ನೀನು ಜೈಲಿನಲ್ಲಿ ಎಷ್ಟು ಸಮಯವಿದ್ದೆ?

ಎರಡು ತಿಂಗಳು.

ನೀನು ಜೈಲಿಗೆ ಹೋಗಿ ಬರಲು ಚಾರ್ಜೇನಿತ್ತು?

ಚಾರ್ಜು ಏನೂ ಇಲ್ಲ. ಎಲ್ಲಾ ಅವರೇ ವಹಿಸಿದ್ದರು.

* * * * * *

ಉಪಾಧ್ಯಾಯ—ನಿನಗೆ ನಾನು 7 ಹಣ್ಣುಗಳನ್ನು ಕೊಟ್ಟರೆ ಅದರಲ್ಲಿ ಮೂರು ಹಣ್ಣುಗಳನ್ನು ನೀನು ತಿಂದರೆ ನಿನ್ನಲ್ಲಿ ಎಷ್ಟು ಹಣ್ಣುಗಳುಂಟು?

ಶಿಷ್ಯ—ನನ್ನಲ್ಲಿ 7 ಹಣ್ಣುಗಳೂ ಉಂಟು.

ಉಪಾ—ಅದು ಹೇಗೋ?

ಶಿಷ್ಯ—3 ಒಳಗೆ 4 ಹೊರಗೆ.

* * * * * *

ಅವ—ಭಾಗವತರು ಪದ ಹೇಳುವಾಗ ಕೆನ್ನೆಯ ಮೇಲೆ ಕೈ ಇಡುವುದೇಕೆ?

ಯಾರಾದರೂ ಕಪಾಲಕ್ಕೆ ಹೊಡೆಯದಂತೆ.

* * * * * *

ಜಡ್ಜಿ—(ವಿಚಾರಣೆ ಮುಗಿಸಿ) ಕೋರ್ಟಿನ ಮುಂದಿಡುವುದೇನಾದರೂ ಇದೆಯೋ?

ಕೈದಿ—ಇಲ್ಲ ಸ್ವಾಮಿ, ಇದ್ದುದೆಲ್ಲವನ್ನೂ ವಕೀಲರೇ ಎಳೆದು ಬಿಟ್ಟಿರುವರು. ಇನ್ನು ನಿಮ್ಮ ಮುಂದೇನನ್ನಿಡಲಿ?

* * * * * *

ಒಬ್ಬ—ಅವನು ಪಕ್ಕಾ ಕಳ್ಳ. ನನ್ನ ಕೊಡೆಯನ್ನು ಜಾರಿಸಿಬಿಟ್ಟ.

ಮತ್ತೊಬ್ಬ—ಎಲ್ಲಿಟ್ಟಿದ್ದಿರಿ.?

ಒಬ್ಬ—ಮೆಜಿಸ್ಟ್ರೇಟ್ ಕಛೇರಿಯಲ್ಲಿ.

ಮತ್ತೊಬ್ಬ—ಸರಿ ಸರಿ ಮತ್ತೇಕೆ ಅಲ್ಲಿ ಪಿರ್ಯಾದು ಮಾಡಲಿಲ್ಲ.?

ಒಬ್ಬ—ಸ್ಯೆ ಸ್ಯೆ ಇದೀಗ ಆಗದ ಕೆಲಸ ಅಂದ್ರೆ, ನಾನದನ್ನು ಹಿಂದೊಮ್ಮೆ ಮೆಜಿಸ್ಟ್ರೇಟ್ ಕೋರ್ಟಿನಿಂದಲೇ ಜಾರಿಸಿದ್ದೆನು.

ಕೇಶವ—ಏನೋ, ಮೊನ್ನೆ ಸಾಲವಾಗಿ ಪಡಕೊಂಡ ಎಂಟಾಣೆ ಈಗ ಕೊಟ್ಟು ಬಿಡಬೇಕು.

ಮಾಧವ—ನಾನ್ಯಾರೋ, ನೀನ್ಯಾರೋ ಎಲ್ಲವೂ ಆತನ ಲೀಲೆ.

(ಕೇಶವ ಬಲವಾಗಿ ಒಂದೇಟು ಏರಿಸಿಬಿಟ್ಟ)

ಮಾಧವ—ಈಗಲೇ ಹೋಗಿ ನಿನ್ನ ಮೇಲೆ ಪಿರ್ಯಾದು ಮಾಡುತ್ತೇನೆ.

ಕೇಶವ—ನಾನ್ಯಾರೋ ನಿನ್ಯಾರೋ ಎಲ್ಲವೂ ಭಗವಂತನ ಇಚ್ಛೆ.

* * * * * *

ಸಂಪಾದಕ—ತಾವು ನಮ್ಮ ಪತ್ರಿಕೆಗೊಬ್ಬ ಚಂದಾದಾರರಾಗಬೇಕು.

ವಕೀಲ—ಸರಿ. ಆಗೋಣವಂತೆ. ಪತ್ರಿಕೆ ಕಳುಹಿಸುತ್ತಿರಿ. ಚಂದಾ ಹಣ ವರ್ಷಾಖೈರಿಗೆ ಕೊಡೋಣವಂತೆ.

ಸಂಪಾದಕ—ಹಾಗಲ್ಲ. ಆರು ತಿಂಗಳಲ್ಲಿ ಕೊಡಿರಿ.

ವಕೀಲ—ಆರು ತಿಂಗಳಲ್ಲಿ ಚಂದಾ ಹಣ ಕೊಟ್ಟು, ನಂತರ ನಿಮ್ಮ ಪತ್ರಿಕೆ ನಿಂತುಬಿಟ್ಟರೆ?

ಸಂಪಾದಕ—ಒಂದು ವರ್ಷದ ವರೆಗೆ ನಾವು ಪತ್ರಿಕೆ ಕಳುಹಿಸಿ ವರ್ಷಾಂತ್ಯಕ್ಕೆ ತಾವು ಸತ್ತುಬಿಟ್ಟರೆ?

* * * * * *

ಯಜಮಾನ—“ಈ ಮೇಜಿನ ಡ್ರಾವರಿನಲ್ಲಿದ್ದ ಎರಡು ರೂಪಾಯಿಗಳು ಕಾಣೆಯಾಗಿವೆ. ಅದರ ಬೀಗದ ಕೈ ಇರುವುದೆಂದರೆ ನಿನ್ನೊಡನೆ ಮತ್ತು ನನ್ನೊಡನೆ ಮಾತ್ರ!”

ಹುಡುಗ—“ಇರಲಿರಲಿ; ನಾನೊಂದು, ನೀವೊಂದು, ರೂಪಾಯಿಯನ್ನು ಪುನಃ ಅದರೊಳಗೆ ಹಾಕಿ, ಆ ಕಳ್ಳವನ್ನು ಮರೆತು ಬಿಡುವ.”

* * * * * *

ಯಜಮಾನ—“ಏನು ಸುಬ್ಬ, ನಿನಗೆ ನಾನು [illegible] ರಜೆ ಶುದ್ಧ [illegible]! [illegible] ಬಂದಿರುವಿಯಲ್ಲಾ!”

[illegible]—“ಸ್ವಾಮಿ, ಮೂರು ದಿನ ಭಾರೀ ಮೋಡ; ದಿನಗಳು [illegible].”

ಸ್ವೀಕಾರ ಮತ್ತು ವಿಮರ್ಶೆ.

ರಾಣಾ ರಾಜಸಿಂಹ:—ಇದು ಶ್ರೀ. ಕೆ. ಪಿ. ವೆಂಕಪ್ಪ ಶೆಟ್ಟರವರಿಂದ ಬರೆಯಲ್ಪಟ್ಟು, ಇಲ್ಲಿಯ ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕ ಶ್ರೀ. ಬಿ. ಲಕ್ಷ್ಮಣದೇವ ವಿದ್ಯಾರ್ಥಿಯವರಿಂದ ಪ್ರಕಟಿಸಲ್ಪಟ್ಟಿತು. ಬೆಲೆ ಆಣೆ ೬. ಇದೊಂದು ಯಕ್ಷಗಾನ ಪ್ರಬಂಧ. ಇದನ್ನು ರಂಗಭೂಮಿಗೆ ತರಬೇಕೆಂಬ ಉದ್ದೇಶದಿಂದ ಅಲ್ಲಲ್ಲಿ ಪದ್ಯಗಳನ್ನು ಸೇರಿಸಿ ಪ್ರಕಟಿಸಿರುವರು. ಭಾವಘಟಿತವೂ ವಾಚನೀಯವೂ ಇದೆ.

ಕರ್ಣಾಟಕ ಬಂಧು:—ಮಾಸಿಕ ಪತ್ರಿಕೆ- ೨೧-೨೩ ತುಕಾರ್‌ವಾಡಿ, ಬೊಂಬಾಯಿ. ಸಂಪಾದಕರು— ಶ್ರೀ. ವಿ. ಯನ್. ಸಸಿಹಿತ್ತಲು, ಬಿ. ಎ. ವಾರ್ಷಿಕ ಚಂದಾ ರೂ. ೧–೮–೦. ಇದರಲ್ಲಿ ಬೇಕೆನಿಸುವ ಧಾರ್ಮಿಕ ಬರಹಗಳೂ, ಉತ್ತಮ ಕತೆ ಕವಿತೆಗಳೂ ಪ್ರಕಟವಾಗುವುವು. ಮುಂಬಾಯಿಯಂತಹ ದೂರನಾಡಿನಲ್ಲಿದ್ದರೂ, ಕನ್ನಡಿಗರೆಂಬ ಅಭಿಮಾನದಿಂದ, ಕನ್ನಡ ಪತ್ರಿಕೆಯೊಂದನ್ನು ಹೊರಡಿಸಿದುದು ಪ್ರತಿಯೋರ್ವ ಕನ್ನಡಿಗನಿಗೂ ಹೆಮ್ಮೆಯ ವಿಷಯ. ಅಂತೆಯೇ ಪ್ರತಿಯೋರ್ವ ಕನ್ನಡಿಗನೂ ಚಂದಾದಾರನಾಗಿ 'ಬಂಧು'ವಿನ ಬೆಳವಣಿಗೆಗೆ ಸಹಾಯಕರಾಗಬೇಕಾಗಿದೆ. ಎಲ್ಲರೂ ಸಹಕರಿಸಲೆಂದೇ ನಮ್ಮ ಪ್ರಾರ್ಥನೆ.

ಮುಂಬಾಯಿಯ ಮೊಗವೀರ ವ್ಯವಸ್ಥಾಪಕ ಮಂಡಳಿಯ 1933ನೇ ಇಸವಿಯ ವಾರ್ಷಿಕ ವರದಿಯು ನಮ್ಮ ಹಸ್ತಗತವಾಗಿದೆ. ವರದಿಯಲ್ಲಿ ಸೂಚಿಸಿದಂತೆ ಮಂಡಳಿಯವರು ಕಳೆದ ೩೨ ವರ್ಷಗಳಿಂದಲೂ ಹೆಚ್ಚಿನ ಕೆಲಸಗಳನ್ನು ಮಾಡಿ ಅಡಿಯನ್ನು ಮುಂದಿಟ್ಟು, ಪರರಿಗೆ ಆದರ್ಶರಾಗಿದ್ದಾರೆ. ಫ್ರೀ ನ್ಯಾಟ್‌ಸ್ಕೂಲ್, ಸ್ತ್ರೀ ಶಾಲೆ, ಫ್ರೀ ರೀಡಿಂಗ್ ರೂಮ್ ಎಂಡ್ ಲೈಬ್ರೇರಿ ಇವು ಇವರ ಸಾಹಸದ ಫಲ. ಅನಾಥರಿಗೆ ವಿದ್ಯಾವೇತನವನ್ನೂ, ಧನಸಹಾಯವನ್ನೂ ಮಾಡಿದ್ದಾರೆ. ಸ್ವಜಾತಿಯ ಬಡವರ ಸೇವೆಗಾಗಿ ಹೆಣಗಾಡುವ ಈ ಮಂಡಳಿಗೆ ಸರ್ವಬಂಧುಗಳೂ ಶಕ್ತಿಯಾನುಸಾರ ಸಹಾಯಮಾಡಲೆಂದೇ ನಮ್ಮ ಕೋರಿಕೆ.

ಬಾಲಕಾಶ್ರಮ, ಶಿವಮೊಗ್ಗ. ಪ್ರಥಮ ವಾರ್ಷಿಕ ವರದಿ (1933–34) ನಿರಾಶ್ರಿತರಾದ ಮಕ್ಕಳ ಸಲುವಾಗಿ ಈ ಆಶ್ರಮವು ಸ್ಥಾಪಿಸಲ್ಪಟ್ಟು, ಬಡ ಮಕ್ಕಳಿಗೆ ಶಿಕ್ಷಣವನ್ನೂ, ಉಡುಪನ್ನೂ, ಆಹಾರವನ್ನೂ ಕೊಟ್ಟು 'ಬಡವರ ಸೇವೆಯೇ ಭಗವಂತನ ಸೇವೆ' ಎಂಬುದನ್ನು ಆದರ್ಶವಾಗಿ ತೋರಿಸುತ್ತದೆ. ಆಶ್ರಮದ ಕಾರ್ಯವು ತುಂಬಾ ಸ್ತುತ್ಯವಾದುದು, ಯೋಗ್ಯವಾದುದು. ಅದಕ್ಕಾಗಿ ನಾವದರ ಒಡೆಯರಿಗೆ ವಂದನೆಗಳನ್ನರ್ಪಿಸುತ್ತೇವೆ. ಪ್ರತಿಯೊಬ್ಬರೂ ಆ ಆಶ್ರಮಕ್ಕೆ ತಮ್ಮಿಂದ ಕೂಡಿದಷ್ಟು ಧನಸಹಾಯವನ್ನೋ, ಇನ್ನಾವ ರೂಪದಲ್ಲಾಗಲೀ ಒತ್ತಾಸೆಯನ್ನೋ ಮಾಡಿ, ಅನಾಥ ಮಕ್ಕಳ ಸಂರಕ್ಷಣೆಯ ಪುಣ್ಯವನ್ನು ಕಟ್ಟಿಕೊಳ್ಳಲೆಂದೇ ನಮ್ಮ ಹಾರೈಕೆ.

ಚೈತನ್ಯ ಕುಸುಮಾವಳಿ, ಧರ್ಮಸ್ಥಳ. ಇದರ ಪ್ರಥಮ ಸಂಚಿಕೆಯು ನಮ್ಮ ಕೈಸೇರಿದೆ. ಆದರದಿಂದ ಸ್ವೀಕರಿಸಿರುವೆವು. ಬಸ್ತಿಗಳ ಭಾವಚಿತ್ರಗಳೂ ಬೇಕೆನಿಸುವ ಬರಹಗಳೂ ಇವೆ. ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರೇ ಈ ಕಾರ್ಯಕ್ಕೆ ಕೈಹಾಕಿದುದು ಸ್ತೋತ್ರಾರ್ಹವಾದುದು. ಇವರ ಉದ್ಯಮವು ಯಶಸ್ವಿಯಾಗಲಿ.

ಶ್ರೀ ದತ್ತಾತ್ರೇಯ ಗ್ರಂಥಮಾಲೆಯ ಪ್ರಥಮ ಪುಷ್ಪವಾದ **'ಅನಾಥೋದ್ಧಾರ'**ವು ಕೈಸೇರಿದೆ. ಇದರ ಲೇಖಕರೂ ಸಂಪಾದಕರೂ ಶ್ರೀ. ನಾರಾಯಣ, ಬಿ. ಎಮ್. ಕಲ್ಯರು. ಉಪಸಂಪಾದಕರು ಶ್ರೀ. ಯಂ. ಸಂಕಪ್ಪ ಹೆಗ್ಡೆಯವರು. ನಾಟಕಕ್ಕೆ ಹೆಸರು ಅನ್ವರ್ಥವಾಗಿರುತ್ತದೆ. ನಾಟಕವು ಗಂಭೀರವಾಗಿದ್ದು ವಾಚನೀಯವಿದೆ. ಸಂಪಾದಕರು ಮುನ್ನುಡಿಯಲ್ಲಿ, "ಕನ್ನಡ ನಾಡಿನ ಅನೇಕ ಪತ್ರಿಕೆಗಳು ಹುಟ್ಟಿ ಬೇಗನೇ ಅದೃಶ್ಯವಾಗುವ ಸಾಂಕ್ರಾಮಿಕ ರೋಗಕ್ಕೆ ಭಕ್ತಿರಹಿತವಾದ ಮತ್ತು ಸ್ವಾರ್ಥಪ್ರತಿಷ್ಠೆಯ ಸೇವೆಯೇ ಕಾರಣವಾಗಿರಬಹುದೆಂದು ಊಹಿಸಬಹುದಾಗಿದೆ. ಆದುದರಿಂದ ನಾವಾದರೂ ಕನ್ನಡ ದತ್ತಾತ್ರೇಯ ಸೇವೆಯನ್ನು ನಿಷ್ಕಾಮ ಪ್ರೇಮದಿಂದಲೇ ಮಾಡುವೆವು"— ಎಂಬದಾಗಿ ಹೇಳಿರುವುದರಿಂದ ಇವರ ವಿನಯದ ಅರಿವುಂಟಾಗುವುದು. ಹಾಗಾಗಲೆಂದೇ ನಮ್ಮ ಹಾರೈಕೆ. ವಾರ್ಷಿಕ ಚಂದಾ ಅ. ವೆ. ಸೇರಿ ರೂ. ೨–೪–೦. ದತ್ತಾತ್ರೇಯ ಗ್ರಂಥಮಾಲಾ, ಶಿರ್ವ, ಉಡ್ಪಿ ದ. ಕ.

ಎಲ್ಲಾ ಕಡೆಗಳಲ್ಲೂ ದೊರಕುತ್ತೆ. ಕೊನೆಯಪಕ್ಷ ನಮ್ಮ ಔಷಧಿಗಳನ್ನು ಉಪಯೋಗಿಸಿರಿ

ಲಸ್ಟರ್ (ದೇಹ ಪೌಷ್ಟಿಕ.) [ರಿಜಿಸ್ಟರ್ಡ್]

ಅಪರೇಷನ್ ಚಿಕಿತ್ಸೆ ಬೇಕಾಗಿಲ್ಲ!! **ಮೇಹಧ್ವಂಸಿನಿ** ಶೀಘ್ರ ಗುಣಕಾರಿ!

ಮೇಹಧ್ವಂಸಿನಿ (ರಿಜಿಸ್ಟರ್ಡ್.)

ರತ್ನಸ್ರಾಯವಾದ ಈ ಔಷಧಿಯನ್ನು ಸೇವಿಸುವುದರಿಂದ ಮಾನವನು ದುಷ್ಟ ಸ್ತ್ರೀಸಂಗಮದಿಂದ ಸಂಪಾದಿಸಿದ ವ್ಯಾಮೋಹದ ಅಸ್ತಿಯನು ಕಳೆದುಕೊಂಡು ದೃಢಕಾಯನಾಗುವನು. ಇದರ ಸೇವನೆಯಿಂದ ಹಸುರು, ಬಿಳಪು, ಕೆಂಪು ಮುಂತಾದ ೨೦ ವಿಧ ಪ್ರಮೇಹಗಳು ಧ್ವಂಸವಾಗುವುವು ಮೇಹಜ್ವರ, ಮೇಹವಾಯು, ಮೇಹಗಡ್ಡೆ, ಹೃದ್ರೋಗ,ಕೈಕಾಲು ಸೆಳೆತ ಚರ್ಮರೋಗಗಳು ನಾಶವಾಗುವುವು. "ಬಹುಮೂತ್ರ"ವೆಂಬ ಘೋರವಾ ಖಾಯಿಲೆ, ಮೂಲವ್ಯಾಧಿ ಮತ್ತು ಸ್ತ್ರೀಯರ "ಸಮಸ್ತ ಗರ್ಭಾಶಯದ ರೋಗಗಳು"ನಾಶವಾಗಿ ಕೆಟ್ಟುಹೋದ ರಕ್ತವು ಶುದ್ಧಿಯಾಗಿ ಶರೀರಕ್ಕೆ ಕಾಂತಿಯು ಬರುವುದು. ಸೇವಿಸುವುದಕ್ಕೆ ಹಿತಕರ, ಹೆಚ್ಚಿಗೆ ಪಥ್ಯವಿಲ್ಲ. ಕ್ರಯ: 24 ತೋಲ ಬಾಟ್ಲಿ ರೂ. ೪—೦—೮. 12 ತೋಲ ರೂ. ೨—೪—೦. 6 ತೋಲ ಬಾಟ್ಲಿ ರೂ. ೧—೨—೦.

ನಿಮ್ಮ ಹಲ್ಲಿನ ಬಾಧೆಗೆ ದಿನವಹಿ ನಮ್ಮ ಲಸ್ಟರ್ ದಂತ ಮಂಜನವನ್ನು ಉಪಯೋಗಿಸಿರಿ. ಪಟ್ಣ 1ಕ್ಕೆ0—1—0

ನಿರಾಶ್ರಿತರಾದವರು ನರಳಬೇಕಾಗಿಲ್ಲ

ಇದರ ಸೇವನೆಯಿಂದ ವಾತ, ಪಿತ್ತ, ಗರ್ಮಿಜಾಡ್ಯ, ಚರ್ಮರೋಗಗಳು ನಿವಾರಣೆಯಾಗುವುವು. ಹೊಟ್ಟೆಶೂಲೆ, ಕೈಕಾಲುರಿ, ಕಣ್ಣು ನಾಶವಾಗಿ ಶರೀರವು ತಂಪಾಗಿ ವೀರ್ಯವು ಗಟ್ಟಿಯಾಗುವುದು. ಬಹಳ ಹಳೇ ಉಬ್ಬಸ, ಗೂರ್ಲು, ದಮ್ಮು, ಕೆಮ್ಮು, ಜ್ವರಗಡ್ಡೆಗಳು ನಾಶವಾಗಿ ಜಠರಾಗ್ನಿ ಹೆಚ್ಚುವುದು. ಅಂಗಾಂಗಗಳಲ್ಲಿಯ ನರಗಳ ನಿರ್ಬಲತ್ವವು ಧ್ವಂಸವಾಗಿ ಅಮಿತವೀರ್ಯವುಂಟಾಗಿ ರಕ್ತಶುದ್ಧಿಯಾಗಿ ಮಾಂಸಮಜ್ಜಾದಿಗಳಿಗೆ ಶಕ್ತಿಯುಂಟಾಗು ವುದು. ಕೆಲಸಗಾರರಿಗೂ, ಉದ್ಯೋಗಸ್ಥರಿಗೂ, ವಿದ್ಯಾರ್ಥಿಗಳಿಗೂ, ನಿರ್ಬಲರಾದವರಿಗೂ "ಕ್ಷಯದಿಂದ ನರಳತಕ್ಕವರಿಗೂ" ಇದರ ಉಪಯೋಗ ಹೇಳ ತೀರದು. ಇದರ ಸೇವನೆಯಿಂದ ಬುದ್ಧಿ ಚುರುಕಾಗುವುದು. ಕ್ರಯ:—24 ತೋಲ ಬಾಟ್ಲಿ ರೂ. ೩—೮—೦. 12 ತೋಲ ಬಾಟ್ಲಿ ರೂ. ೨—೦—೦ 6 ತೋಲ ಬಾಟ್ಲಿ ರೂ. ೧—೧—೦.

ವೇಪ್ರಿನ್ (ಬಹಿರ್ಲೇಪ.) [ರಿಜಿಸ್ಟರ್ಡ್] (ಉರಿ, ನೋವು, ಒಡತೆಗಳಿಲ್ಲದೆ ಸುಲಭ ಚಿಕಿತ್ಸೆ.)

ಇದರ ಲೇಪನದಿಂದ ಕಜ್ಜಿ, ಗಜಕರ್ಣ, ಇಸಬು, ಗಾಯ, ವ್ರಣಗಳು ಆರುವುವು. ಟಾಕಿ, ಮುಸುಕು, ಮೇಹವ್ರಣ, ಮಡಿಮೆ, ತಿಂಡಿ, ಮಚ್ಚ ಕಡಿತ ನಾಶವಾಗಿ ಚರ್ಮ ಪೂರ್ವ ಸ್ಥಿತಿಗೆ ಬರುವುದು. ಪರಂಗಿಹುಣ್ಣು. ತೊಡೆವಾಳ ಇವುಗಳಿಗೆ ಅತ್ಯಂತ ಪ್ರಯೋಜನಕಾರಿ. ಅಕಸ್ಮಾತ್ತಾಗಿ ಆಗುವ ಘಾಯಗಳಿಂದ ರಕ್ತ ಸುರಿವಿಕೆಯನ್ನು ನಿಲ್ಲಿಸಲು ವೇಪ್ರಿನ್' ಪ್ರತಿಯೊಬ್ಬರ ಮನೆಯಲ್ಲಿಯೂ ಇದ್ದೇ ಇರಬೇಕು. ಚೇಳಿನ ವಿಷವನ್ನು ತೆಗೆಯುವುದ ರಲ್ಲಿ ಅದ್ವಿತೀಯವಾದದ್ದು. ಕ್ರಯ:—½ ಔನ್ಸು ಸೀಸೆ ೦—೮—೦ ¼ ಔನ್ಸು ೦—೪—೦.

ಕೆಲವು ಅಭಿಪ್ರಾಯಗಳು.

ಗಿರಿ ಎಸ್ಟೇಟ್ ಮ॥ ಡೊಗ್ಲಾಸ್ ಮೆಪ್ಸನ್ ಸಾಹೇಬರು ಬರೆಯುವುದೇನೆಂದರೆ—ನಿಮ್ಮ ಮುಲಾಮು ಚೇಳಿನ ಕಡಿತಕ್ಕೂ, ಘಾಯಗಳಿಗೂ, ಏಟು ಬಿದ್ದದ್ದಕ್ಕೂ ತುಂಬಾ ಗುಣಕಾರಿಯಾಯಿತು. ಎಲ್ಲಾ ಕಾಫಿ ತೋಟಗಳಲ್ಲಿಯೂ ಅಕಸ್ಮಾತ್ತಾಗಿ ಆಳುಗಳಿಗೆ ಸಂಭವಿಸುವ ತೊಂದರೆಗಳಿಗೆ ತುಂಬಾ ಉಪಯುಕ್ತವಾದ ಔಷಧವು. ಎಲ್ಲರಲ್ಲಿಯೂ ಇರತಕ್ಕದ್ದು ಅತ್ಯವಶ್ಯಕವು.

ಅಹಮದಾಬಾದ್ ಕಾಂಗ್ರೆಸ್ ಆಸ್ಪತ್ರೆಯವರು ಬರೆಯುವುದೇನೆಂದರೆ—ನೀವು ಮೆಹರ್ಬಾನಿ ಮಾಡಿ ಕಳುಹಿಸಿದ 'ವೇಪ್ರಿನ್' ಮುಲಾಮು ಉಪ ಯೋಗಿಸಿದ್ದಾಯಿತು. ಬಹಳ ಚೆನ್ನಾಗಿ ಗುಣಕೊಟ್ಟಿದೆ. ಇನ್ನೂ ಸ್ವಲ್ಪ ಕಳುಹಿಸಿದರೆ ಒಳ್ಳೆಯದು.

ಮ॥ ಬಿ. ಎನ್. ವಿಜಯದೇವ, ಬಾರ್-ಅಟ್-ಲಾ, ಬೆಂಗಳೂರು ಇವರು ಬರೆಯುವುದೇನಂದರೆ - "ಮೇಹಧ್ವಂಸಿನಿ"ಯನ್ನು ಇಲ್ಲಿ ಒಬ್ಬರಿಗೆ ಕೊಟ್ಟು ಗುಣ ಕಂಡದ್ದರಿಂದ ನಿಮ್ಮ ಕಂಪೆನಿಯು ಶ್ರೇಯಸ್ಸಿಗೆ ಬರಲೆಂದು ಹಾರೈಸುವ.

ಮ॥ ರಾ॥ ಲೋವರ್ ಬರ್ಮ ಸೋಫಿಕಾಕಾವರು ಬರೆಯುವುದೇನಂದರೆ—ನಿಮ್ಮ ಅರ್ಧ ಬಾಟ್ಲಿ ಮೇಹಧ್ವಂಸಿನಿಯಿಂದ ಆರೋಗ್ಯತೋರುತ್ತಾ ಇದೆ. ದಯವಿಟ್ಟು ಇನ್ನೊಂದು ಬಾಟ್ಲಿ ಮೇಹಧ್ವಂಸಿನಿ ಮತ್ತು ನಿಮ್ಮ ಅರ್ಧ ಬಾಟ್ಲಿ ಲಸ್ಟರ್ ಕಳುಹಿಸಿಕೊಡಿರಿ.

ಮ॥ ರಾ॥ ಗಣೇಶರಾವ್, ಪೈಕ್ರಾಫ್ ರೋಡ್, ಮದ್ರಾಸ್ ಬರೆಯುವುದೇನಂದರೆ—ನನ್ನ ದೀರ್ಘಕಾಲದ ಇಸಬು ನಿಮ್ಮ ವೇಪ್ರಿನ್ ಉಪ ಯೋಗಿಸಿದ್ದರಿಂದ ಗುಣಕ್ಕೆಬಂದಿದೆ. ಇದು ಚರ್ಮವ್ಯಾಧಿಗೆ ಉತ್ತಮವಾದ್ದೆಂದು ನನ್ನ ಅನುಭವದಿಂದ ಹೇಳುತ್ತೇನೆ.

ಕಂಚಿ ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್, ಸೆಕ್ರಿಟೆರಿ ಮ॥ ಟಿ. ಆರ್. ರಂಗನಾಥನರವರು ಬರೆಯುವುದೇನಂದರೆ—"ಲಸ್ಟರ್" ಔಷಧವು ಕಾಸ, ಶ್ವಾಸಗಳಿಗೂ ಮತ್ತು ಇತರ ವ್ಯಾಧಿಗಳಿಗೂ ತುಂಬಾ ಅನುಕೂಲಕೊಟ್ಟಿತು. ನನ್ನ ಅನೇಕ ಮಿತ್ರರಲ್ಲಿಯೂ ಬಂಧು ಬಳಗದಲ್ಲಿಯೂ ಪ್ರಚುರಪಡಿಸಿದ್ದೇನೆ. ನನ್ನ ಸ್ನೇಹಿತರು ಸಹ ಮೇಲ್ಕಂಡ ವ್ಯಾಧಿಗಳಲ್ಲಿ ಉಪಯೋಗಿಸಿ ಗುಣ ಕಂಡಿದ್ದಾರೆ. ದೇವರು ನಿಮ್ಮ ಪ್ರಯತ್ನಗಳಿಗೆ ಇನ್ನೂ ಹೆಚ್ಚು ಜಯಪ್ರದವನ್ನುಂಟು ಮಾಡಲಿ ಎಂಬದಾಗಿ ನನ್ನ ಪ್ರಾರ್ಥನೆ.

ಲಸ್ಟರ್ ಮ್ಯಾನಿಫ್ಯಾಕ್ಚರಿಂಗ್ ಕಂಪೆನಿ, ಚಿಕ್ಕಮಗಳೂರು (ಮೈಸೂರು ದೇಶ.)

Printed by V. S. Kudva at the Sharada Press, Mangalore and published by Mangalore Jarappa at the Badavara Bandhu Office, Hampankatta Mangalore.